**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೧೦ ೬೪೬೦
ಫ್ಯಾಕ್ಸ್ : ೦೮೦–೨೨೨೧ ೧೭೩೦
www.karnatakasahithyaacademy.org


# ವಾರ್ತಾಪತ್ರ

ದ್ವೈಮಾಸಿಕ ಪತ್ರಿಕೆ


**ಸಂಚಿಕೆ : ೫೫**
**ಸೆಪ್ಟೆಂಬರ್–ಅಕ್ಟೋಬರ್ – ೨೦೦೯**

*ಪ್ರಧಾನ ಸಂಪಾದಕರು*
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಸಂಪಾದಕರು*
**ಆರ್. ವಸಂತ್‌ಕುಮಾರ್**
**ಎಂ.ಡಿ. ತ್ರಿಲೋಚನ ಒಡೆಯರ್**

*ಪ್ರಕಾಶಕರು*
**ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

*ಮುಖಪುಟ ಚಿತ್ರ*
**ರವಿಕುಮಾರ ಕಾಶಿ**

*ಮುದ್ರಕರು*
**ಇಳಾ ಮುದ್ರಣ**
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫ ೭೧೫೯


## ಪರಿವಿಡಿ


- ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಜರುಗಿದ ಕಾರ್ಯಕ್ರಮಗಳ ವರದಿ ... ೩
- ಪತ್ರಿಕಾ ಮಾರ್ದನಿಗಳು ... ೬




ಅಕಾಡೆಮಿ ಹಮ್ಮಿಕೊಂಡಿದ್ದ ಕಾವ್ಯ ರಚನಾ ಕಮ್ಮಟದಲ್ಲಿ ಭಾಗವಹಿಸಿದ ಗಣ್ಯರು



ಅಲಕ್ಷಿತ ಸಮುದಾಯಗಳ ಸಾಹಿತ್ಯ ಸಂಸ್ಕೃತಿ : ಸವಾಲುಗಳು ಹಾಗೂ ಸಾಧ್ಯತೆಗಳು ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಡಾ. ರಹಮತ್ ತರೀಕೆರೆ ಮಾತನಾಡುತ್ತಿರುವುದು



ಶಾಂತರಸ ಕುರಿತ ವಿಚಾರ ಸಂಕಿರಣದಲ್ಲಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಮಾತನಾಡುತ್ತಿರುವುದು

# ಅಕಾಡೆಮಿಯು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಕಿರುನೋಟ

**ಕ**ರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ ೧೬ರಂದು ಕೊಡಗಿನ ಪತ್ರಿಕಾ ಭವನದಲ್ಲಿ "ಭಾರತೀಸುತರ ಕಾದಂಬರಿಗಳು ಮತ್ತು ಸಾಮಾಜಿಕ ಸಂದರ್ಭ" ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕನ್ನಡದ ಪ್ರಸಿದ್ಧ ವಿಮರ್ಶಕರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಅವರು ಮಾತನಾಡಿ 'ನವೋದಯ ನವ್ಯ ಸಾಹಿತ್ಯದಷ್ಟೇ ಮುಖ್ಯವಾದ ಪ್ರಗತಿಶೀಲ ಚಳವಳಿಯ ಬಗ್ಗೆ ವಿಮರ್ಶಾವಲಯ ಒಂದು ರೀತಿಯಲ್ಲಿ ನಿರ್ಲಕ್ಷ್ಯ ತಳೆದಿರುವುದು ಕುತೂಹಲಕಾರಿ ಸಂಗತಿ ಎಂದು ವಿಷಾದಿಸಿದರು.

ಗಂಡು ಹಾಗೂ ಹೆಣ್ಣಿಗೆ ಸಂಬಂಧಿಸಿದ ವಿಚಾರಗಳಿಗೆ ಸಂಬಂಧಿಸಿದ ಚಿತ್ರಣ ಭಾರತೀಸುತರ ಲೇಖನಗಳಲ್ಲಿ ಅತ್ಯಂತ ನವಿರಾಗಿವೆ, ವ್ಯಕ್ತಿ ಮತ್ತು ಸಮಾಜ, ಸಂಸ್ಕೃತಿ ಹಾಗೂ ಸಮಾಜಗಳ ನಡುವಿನ ಸಂಘರ್ಷವನ್ನು ಅವರ ಲೇಖನಗಳಲ್ಲಿ ಕಾಣುತ್ತೇವೆ ಹೀಗಾಗಿ ಪ್ರಗತಿಶೀಲ ಲೇಖಕರಲ್ಲಿ ಭಾರತೀಸುತರು ವಿಶಿಷ್ಟರು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಟಿ.ಪಿ.ರಮೇಶ್ ಪದಾಧಿಕಾರಿಗಳಾದ ಶ್ವೇತಾ ರವೀಂದ್ರ, ಭಾರತಿ ರಮೇಶ್, ಧನಂಜಯ ಮುಂತಾದವರು ಭಾಗವಹಿಸಿದ್ದರು.

## ಕಾವ್ಯ ರಚನಾ ಕಮ್ಮಟ

ನಂಜನಗೂಡು ತಾಲ್ಲೂಕು ಸುತ್ತೂರು ಮಠದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಜೆ.ಎಸ್.ಎಸ್. ವಿದ್ಯಾಪೀಠದ ಸಹಯೋಗದಲ್ಲಿ ಅಕ್ಟೋಬರ್ ೬ರಿಂದ ೧೦ರವರೆಗೆ ಸುಮಾರು ಐದು ದಿನಗಳ ಕಾಲ ಯುವ ಕವಿಗಳ ಕಾವ್ಯ ರಚನಾ ಕಮ್ಮಟವನ್ನು ಹಮ್ಮಿಕೊಳ್ಳಲಾಗಿತ್ತು.

ಕಾವ್ಯರಚನಾ ಕಮ್ಮಟದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕವಿ ಡಾ. ಎನ್.ಎಸ್. ಲಕ್ಷ್ಮಿನಾರಾಯಣಭಟ್ಟ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ 'ವ್ಯಕ್ತಿಯ ಸ್ವಭಾವದಿಂದಲೇ ಕವಿತೆ ಹೊರಬರುತ್ತದೆ. ಸಾಹಿತ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳಸಬೇಕಾಗಿದೆ ಇದಕ್ಕೆ ಇಂತಹ ಕಾವ್ಯ ರಚನಾ ಕಮ್ಮಟಗಳು ಅವಕಾಶ ಸೃಷ್ಟಿಸಲಿವೆ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯ 'ಅನುಭವಿಸಿ ಬರೆದಾಗಲೇ ಅದು ಸುಂದರ ಕಾವ್ಯವಾಗಿ ಮೂಡಿಬರಲು ಸಾಧ್ಯ ಎಂದರು. ಮನುಷ್ಯ ತಾನು ಬಳಸಿಕೊಂಡು ಬಿಸಾಡುವ ಬತ್ತದಹುಲ್ಲು, ಅಕ್ಕಿ ತೊಳೆದ ನೀರು, ಹಣ್ಣಿನಸಿಪ್ಪೆ, ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ಹಸುವಿಗೆ ಆಹಾರವಾಗಿ ನೀಡುತ್ತಾನೆ, ಅದನ್ನು ತಿಂದ ಹಸು ಪವಾಡವೆಂಬಂತೆ ಅಮೃತ ಸಮಾನವಾದ ಹಾಲನ್ನು ಕೊಡುತ್ತದೆ. ಹಾಗೇ ಕವಿಗಳಾದವರು ಸಮಾಜದ ಓರೆ ಕೋರೆಗಳನ್ನು ತಿದ್ದುವ ಕಾವ್ಯ ರಚಿಸುವ ಮೂಲಕ ಪವಾಡ ಮೆರೆಯಬೇಕು ಎಂದರು. ಕಾವ್ಯ ರಚನಾ ಕಮ್ಮಟ ಶಿಬಿರದ ನಿರ್ದೇಶಕರಾದ ಧಾರವಾಡದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಸಾಹಿತಿ ಮಲೆಯೂರು ಗುರುಸ್ವಾಮಿ, ಮ.ಗು. ಸದಾನಂದಯ್ಯ, ಡಾ. ಬಿ.ವಿ. ವಸಂತ ಕುಮಾರ್ ಡಾ. ಪಿ.ಕೆ. ರಾಜಶೇಖರ್ ಉಪಸ್ಥಿತರಿದ್ದರು ರಾಜ್ಯದ ನಾನಾ

ಭಾಗಗಳಿಂದ ಬಂದಿದ್ದ ಸುಮಾರು ೪೦ಕ್ಕೂ ಹೆಚ್ಚು ಯುವ ಕವಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು.

## ಎಚ್.ಎಲ್. ನಾಗೇಗೌಡರ ಬದುಕು ಬರಹ

ರಾಮನಗರ ಜಿಲ್ಲೆಯ ಜಾನಪದ ಲೋಕದಲ್ಲಿ ಅಕ್ಟೋಬರ್ ೮ರಂದು ಕರ್ನಾಟಕ ಜಾನಪದ ಪರಿಷತ್ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಎಚ್.ಎಲ್. ನಾಗೇಗೌಡರ ಬದುಕು ಬರಹ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ನಾಡೋಜ ಜಿ.ನಾರಾಯಣ ಮಾತನಾಡಿ ಮಾನವಕುಲ ಸೃಷ್ಟಿಯಾದಾಗಿನಿಂದ ಜಾನಪದ ಕಲೆಯು ಅಸ್ತಿತ್ವವನ್ನು ಪಡೆದಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲ್ಲದಿರುವ ಸಂದರ್ಭದಲ್ಲಿ ಜಾನಪದ ಕಲೆಯು ದೈವದತ್ತ ಕಲೆಯಾಗಿ ಜನಮಾನಸದಲ್ಲಿ ನೆಲೆಸಿತ್ತು. ಇಂತಹ ಕಲೆಗಳನ್ನು ಮುಂದಿನ ಪೀಳಿಗೆಗೆ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಹೊಣೆಯಾಗಿದೆ ಎಂದು ತಿಳಿಸಿದರು.

ಜಾನಪದ ಪರಿಷತ್ತಿನ ಕಾರ್ಯಾಧ್ಯಕ್ಷ ಪಿ. ತಿಮ್ಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಇಂದಿರಾ ಬಾಲಕೃಷ್ಣ, ಕಾರ್ಯದರ್ಶಿ ಡಾ. ಚಕ್ಕೆರೆ ಶಿವಶಂಕರ್, ಆಡಳಿತಾಧಿಕಾರಿ ಪ್ರೊ. ಎಂ.ಶಿವನಂಜಯ್ಯ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರು ಉಪಸ್ಥಿತರಿದ್ದರು.

C C

## ಮುಂದುವರಿದ ದುರ್ಬಲರ ಶೋಷಣೆ

ಬೆಳಗಾವಿಯ ಜೈನ್ ಕಾಲೇಜಿನಲ್ಲಿ "ಅಲಕ್ಷಿತ ಸಮುದಾಯಗಳ ಸಾಹಿತ್ಯ-ಸಂಸ್ಕೃತಿ ಸವಾಲುಗಳು ಹಾಗೂ ಸಾಧ್ಯತೆಗಳು" ಎಂಬ ರಾಜ್ಯಮಟ್ಟದ ಎರಡು ದಿನಗಳ ವಿಚಾರ ಸಂಕಿರಣವನ್ನು ಸೆಪ್ಟೆಂಬರ್ ೧೦ ಮತ್ತು ೧೧ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಜೆ.ಜಿ.ಐ ಜೈನ ಮಹಾವಿದ್ಯಾಲಯಗಳ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು.

ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ಕೆ.ಆರ್. ದುರ್ಗಾದಾಸ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ "ಪ್ರಾಚೀನ ಕಾಲದಲ್ಲಿ ಅಲಕ್ಷಿಸಲಾದ ಸಮುದಾಯವನ್ನು ಇಂದಿಗೂ ಹೊಸ ರೂಪದಲ್ಲಿ ನಿರ್ಲಕ್ಷಿಸಲಾಗುತ್ತಿದೆ. ಇದರಿಂದ ಹೊಸ ಬಗೆಯ ಶೋಷಣೆಯ ಮುಖಗಳು ಜನ್ಮತಾಳಿವೆ. ಪ್ರಾಚೀನ ಆರ್ಯ ದ್ರಾವಿಡ ಭಿನ್ನತೆ ಇನ್ನೊಂದು ರೂಪದಲ್ಲಿ ಇಂದಿಗೂ ನಮಗೆ ಕಾಣುತ್ತಿದೆ" ಎಂದು ಪ್ರತಿಪಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಪ್ರೊ. ಚಂದ್ರಕಾಂತ ಕುಸನೂರ "ಸ್ವತಂತ್ರ ಭಾರತದಲ್ಲಿ ಇಂದಿಗೂ ಸ್ವಾತಂತ್ರ್ಯ ಸಮಾನತೆ ಎಂಬುದು ಇಲ್ಲವಾಗಿದೆ. ನಿರಂತರ ಶೋಷಣೆ ಮುಂದುವರಿದಿದೆ" ಎಂದು ವಿಷಾದಿಸಿದರು. ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ರಹಮತ್ ತರೀಕೆರೆ ಮಾತನಾಡಿ "ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಅಲಕ್ಷಿತ ಸಮುದಾಯ ಹಿಂದುಳಿದಿದೆ ಆದರೆ ಆ ಸಮುದಾಯದ ಬದುಕು ಮಾತ್ರ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಜೆ.ಜಿ.ಐ.ಶಿಕ್ಷಣ ಸಂಸ್ಥೆಯ ನಿರ್ದೇಶಕ ಆರ್.ಜಿ.ಧಾರವಾಡಕರ ಸಾಹಿತ್ಯ ಅಕಾಡೆಮಿಯ ಸದಸ್ಯ ಡಾ. ಶಿವಾನಂದ ಕೆಳಗಿನಮನಿ ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

C C

## "ಶಾಂತರಸ – ಒಂದು ನೆನಪು"

ರಾಯಚೂರಿನ ಹಮದರ್ದ್ ಶಾಲೆಯಲ್ಲಿ ಸೆಪ್ಟೆಂಬರ್ ೨೪ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಶರಣ ಸಾಹಿತ್ಯ ಪರಿಷತ್ತುಗಳ ಆಶ್ರಯದಲ್ಲಿ "ಶಾಂತರಸ – ಒಂದು ನೆನಪು" ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ಸಾಹಿತಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ "ಕನ್ನಡ ಸಾಹಿತ್ಯ ಲೋಕಕ್ಕೆ ಗಜಲ್‌ಗಳನ್ನು ಪರಿಚಯಿಸಿದ ಕೀರ್ತಿ ದಿವಂಗತ ಶಾಂತರಸರಿಗೆ ಸಲ್ಲುತ್ತದೆ" ಎಂದರು. ಶಾಂತರಸರಲ್ಲಿದ್ದ ಸಮೂಹ ಪ್ರಜ್ಞೆಯಿಂದಾಗಿಯೇ ರಾಜ್ಯದ ಈ ಭಾಗದಲ್ಲಿ ಅದ್ಭುತವಾದ ಸಾಹಿತ್ಯ ಸೃಷ್ಟಿಗೆ ಕಾರಣವಾಯಿತು. ಮಾನವ ಮತ್ತು ಮಾನವೀಯತೆಯ ಸಂಬಂಧ ಅವರು ಕೃತಿಯಲ್ಲಿ ವ್ಯಕ್ತವಾಗಿರುವ ರೀತಿ 'ಅಗಾಧ' ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಯ್ಯಪ್ಪ ತುಕ್ಕಾಯಿ ಅಕಾಡೆಮಿಯ ಸದಸ್ಯರಾದ ಚಂದ್ರಶೇಖರ ವಸ್ತ್ರದ ಮತ್ತಿತರರು ಉಪಸ್ಥಿತರಿದ್ದರು ಇದೇ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ನಡೆದ ಪುಸ್ತಕ ಪ್ರದರ್ಶನ ಮತ್ತು ಮಾರಾಟಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತ್ತು.

## ಶ್ರವಣಬೆಳಗೊಳದಲ್ಲಿ ಕಥಾ ಕಮ್ಮಟ

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಎಸ್.ಡಿ.ಜೆ.ಎಂ.ಐ. ಆಡಳಿತ ಮಂಡಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳ, ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ ೩೦ರಿಂದ ನವೆಂಬರ್ ೩ರವರೆಗೆ ಐದು ದಿನಗಳ ಕಾಲ ಯುವ ಬರಹಗಾರರಿಗಾಗಿ "ಕಥಾಕಮ್ಮಟ"ವನ್ನು ಶ್ರವಣಬೆಳಗೊಳದ ಕಾನಜಿ ಯಾತ್ರಿಕಾಶ್ರಮದಲ್ಲಿ ಏರ್ಪಡಿಸಲಾಗಿತ್ತು. ನವೆಂಬರ್ ೩೦ರಂದು ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳ ಸಾನ್ನಿಧ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ಮನುಬಳಿಗಾರ್ ಉದ್ಘಾಟಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶಿಬಿರ ನಿರ್ದೇಶಕರಾದ ಡಾ. ಅಮರೇಶ ನುಗಡೋಣಿ ಮತ್ತು ಡಾ. ಪ್ರಹ್ಲಾದ ಅಗಸನಕಟ್ಟೆ ಇವರ ನಿರ್ದೇಶನದಲ್ಲಿ ಐದು ದಿನಗಳ 'ಕಥಾ ಕಮ್ಮಟ' ಸುಸೂತ್ರವಾಗಿ ಜರುಗಿತು. ಐದು ದಿನಗಳ ಈ ಕಮ್ಮಟದಲ್ಲಿ ಡಾ. ಜಿ.ಆರ್. ತಿಪ್ಪೇಸ್ವಾಮಿ, ಡಾ. ಶಾಮಸುಂದರ ಬಿದರಕುಂದಿ, ಡಾ. ಬಾಳಾಸಾಹೇಬ ಲೋಕಾಪುರ ಡಾ. ಎಸ್. ನಾಗವೇಣಿ, ಡಾ. ಎಚ್. ದಂತಪ್ಪ, ಕೇಶವಮಳಗಿ ಡಾ. ಕೆ. ವೈ. ನಾರಾಯಣಸ್ವಾಮಿ, ಡಾ. ಎಂ.ಎಸ್. ಶೇಖರ್, ಕೇಶವರೆಡ್ಡಿ ಹಂದ್ರಾಳ, ಡಾ. ರಹಮತ್ ತರೀಕೆರೆ, ಡಾ. ಬಸವರಾಜ ಡೋಣೂರ ಸೇರಿದಂತೆ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ನಾಡಿನ ವಿವಿಧ ಮೂಲೆಗಳಿಂದ ಕಮ್ಮಟಕ್ಕೆ ಆಯ್ಕೆಯಾಗಿದ್ದ ಯುವ ಬರಹಗಾರರಿಗೆ ಮಾರ್ಗದರ್ಶನ ನೀಡಿದರು.

C C

## ಕನ್ನಡ ಸಾಹಿತ್ಯ ಮತ್ತು ಲೋಹಿಯಾ ವಿಚಾರ ಸಂಕಿರಣ

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಪ್ರಜ್ಞಾರಂಗ, ಸಾಗರ ಇವರ ಸಂಯುಕ್ತಾಶ್ರಯದಲ್ಲಿ ಡಾ. ರಾಮಮನೋಹರ ಲೋಹಿಯಾ ಜನ್ಮಶತಮಾನೋತ್ಸವದ ಅಂಗವಾಗಿ "ಕನ್ನಡ ಸಾಹಿತ್ಯ ಮತ್ತು ಲೋಹಿಯಾ ವಿಚಾರ ಸಂಕಿರಣ" ಸಾಗರದಲ್ಲಿ ಜರುಗಿತು. ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಕಡಿದಾಳು ಶಾಮಣ್ಣ ಲೋಹಿಯಾ ವಿಚಾರಗಳ ಅಗತ್ಯತೆಗಳನ್ನು ವಿವರಿಸಿದರು. ಆಶಯ ನುಡಿಯನ್ನಾಡಿದ ಡಿ.ಎಸ್. ನಾಗಭೂಷಣ ಅವರು ಲೋಹಿಯಾ ಅವರ ತತ್ವಗಳನ್ನು ವಿವರಿಸಿದರು. ವಿಚಾರ ಸಂಕಿರಣದ ಎರಡು ಗೋಷ್ಠಿಗಳಲ್ಲಿ ಡಾ. ನಟರಾಜ ಹುಳಿಯಾರ್ ಪ್ರೊ.ಎಚ್. ಗೋವಿಂದಯ್ಯ, ಪ್ರೊ. ಟಿ.ಪಿ. ಅಶೋಕ, ಪ್ರೊ. ಕಿ.ರಂ. ನಾಗರಾಜ, ಪ್ರೊ. ಕೆ.ಬಿ. ಸಿದ್ದಯ್ಯ, ಡಾ. ರಾಜೇಂದ್ರ ಚೆನ್ನಿ, ಶ್ರೀ ಮಹೇಶ್ ಹರವೆ ಡಾ. ಕಾಳೇಗೌಡ ನಾಗವಾರ ಮುಂತಾದವರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಸಮಾರೋಪ ಸಮಾರಂಭದಲ್ಲಿ ಡಾ. ಕೆ. ಮರುಳಸಿದ್ದಪ್ಪ ಹಾಗೂ ಹಿರಿಯರ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಚ್. ಗಣಪತಿಯಪ್ಪ ಭಾಗವಹಿಸಿದರು. ಪ್ರಜ್ಞಾರಂಗದ ಅಧ್ಯಕ್ಷರಾದ ಶ್ರೀ ಎಚ್.ಬಿ.ರಾಘವೇಂದ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಶ್ರೀ ಕತ್ತಿಗೆ ಚನ್ನಪ್ಪ ಮುಂತಾದವರು ಉಪಸ್ಥಿತರಿದ್ದರು.

C C

## ಡಾ. ರಾ.ಗೌ. ವ್ಯಕ್ತಿ ಮತ್ತು ಸಾಹಿತ್ಯ

ಕರ್ನಾಟಕ ಸಂಘ ಮಂಡ್ಯ, ಮಹಿಳಾ ಸರ್ಕಾರಿ ಕಾಲೇಜು ಸಾಹಿತ್ಯ ವೇದಿಕೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ ವತಿಯಿಂದ "ಡಾ. ರಾ.ಗೌ. ವ್ಯಕ್ತಿ ಮತ್ತು ಸಾಹಿತ್ಯ" ಕುರಿತ ಎರಡು ದಿನಗಳ ವಿಚಾರ ಸಂಕಿರಣ ಆಗಸ್ಟ್ ೨೮ ಮತ್ತು ೨೯ರಂದು ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಮಾಜಿ ಅಧ್ಯಕ್ಷ ಪ್ರೊ. ಬಿ. ಕೆ. ಚಂದ್ರಶೇಖರ್ 'ಕೋಮುವಾದ ಉಗ್ರವಾದಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದು ಅಭಿಪ್ರಾಯಪಟ್ಟರು. ದೇಶದಲ್ಲಿ ಕೋಮು ಘರ್ಷಣೆಗಳು ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಯಾಗಿದೆ. ಇದು ಸಂವಿಧಾನಕ್ಕೆ ವಿರುದ್ಧವಾದದ್ದು ಭಯೋತ್ಪಾದನೆ ಗಿಂತ ಹೆಚ್ಚು ಅಪಾಯಕಾರಿಯಾಗಿದೆ ಎಂದು ಅವರು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಕಾರ್ಯದರ್ಶಿ ಜಯರಾಮರಾಜೇ ಅರಸ್ ಮಾತನಾಡಿ "ಯಾವುದೇ ವ್ಯಕ್ತಿಗೆ ಪ್ರಶಸ್ತಿಗಳು ಹುಡುಕಿಕೊಂಡು ಬಂದಾಗ ಮಾತ್ರ ಹೆಚ್ಚಿನ ಗೌರವ ಇರುತ್ತದೆ. ಅದೇ ರೀತಿಯಲ್ಲಿ ರಾ.ಗೌ. ಅವರಿಗೆ ಐದು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದಿವೆ. ಇದಕ್ಕಿಂತ ದೊಡ್ಡ ಗೌರವ ಮತ್ತೊಂದಿಲ್ಲ ಎಂದರು. ಕಾರ್ಯಕ್ರಮದಲ್ಲಿ ಸಂಶೋಧಕ ಹ.ಕ. ರಾಜೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ, ಪ್ರೊ. ಜಯಪ್ರಕಾಶ್ ಗೌಡ, ಪ್ರೊ. ಜಿ. ಟಿ. ವೀರಪ್ಪ, ತೈಲೂರು ವೆಂಕಟಕೃಷ್ಣ, ಪ್ರಾಂಶುಪಾಲ ನಾಗರಾಜು, ಡಾ. ರಾ.ಗೌ., ಕ್ಯಾತನಹಳ್ಳಿ ರಾಮೇಗೌಡ, ಸಬಿಹಾ ಭೂಮಿಗೌಡ, ಸೇರಿದಂತೆ ಹಲವು ವಿದ್ವಾಂಸರು ಕಾಲೇಜು ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

p

## ಪತ್ರಿಕಾ ಮಾರ್ದನಿಗಳು

# ಭಾರತೀಸುತರ ರಾಜ್ಯಮಟ್ಟದ ವಿಚಾರಗೋಷ್ಠಿಯಲ್ಲಿ ಡಾ. ನರಹಳ್ಳಿ ವಿಷಾದ–ಪ್ರಗತಿಶೀಲ ಲೇಖಕರ ಬಗ್ಗೆ ವಿಮರ್ಶಾ ವಲಯ ನಿರ್ಲಕ್ಷ್ಯ

**ಮಡಿಕೇರಿ:**

'ನವೋದಯ, ನವ್ಯ ಸಾಹಿತ್ಯದಷ್ಟೇ ಮುಖ್ಯವಾದ ಪ್ರಗತಿಶೀಲ ಚಳವಳಿಯ ಲೇಖಕರ ಬಗ್ಗೆ ವಿಮರ್ಶಾ ವಲಯ ಒಂದು ರೀತಿಯಲ್ಲಿ ನಿರ್ಲಕ್ಷ್ಯ ತಳೆದಿರುವುದು ಕುತೂಹಲಕಾರಿ ಸಂಗತಿ' ಎಂದು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಶುಕ್ರವಾರ ಇಲ್ಲಿ ವಿಷಾದಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತ ಆಶ್ರಯದಲ್ಲಿ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ 'ಭಾರತೀಸುತರ ಕಾದಂಬರಿಗಳು ಮತ್ತು ಸಾಮಾಜಿಕ ಸಂದರ್ಭ' ಕುರಿತ ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ವಿಮರ್ಶಕರ ಪಟ್ಟಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕರ ದೊಡ್ಡ ಪರಂಪರೆಯೇ ಇದೆ. ಭಾಷೆ ಹಾಗೂ ಸಂಸ್ಕೃತಿಯ ಯಾಜಮಾನ್ಯ ವಹಿಸಿರುವ ಸಂಸ್ಥೆಗಳು ಹಾಗೂ ವಿಮರ್ಶಾ ವರ್ಗ ನಿರ್ದಿಷ್ಟ ಲೇಖಕರನ್ನು ಮಾತ್ರ ಗುರುತಿಸಿ ಮತ್ತೆ ಮತ್ತೆ ಅವರ ಬಗ್ಗೆಯೇ ಚರ್ಚೆಗೆ ಅವಕಾಶ ಮಾಡಿ ಕೊಡುತ್ತಿದೆ. ಅದರಾಚೆಗಿನ ಲೇಖಕರನ್ನು ನಿರ್ಲಕ್ಷ್ಯದಿಂದ ಕಾಣುತ್ತಿದ್ದೇವೆ. ಈ ನಿಟ್ಟಿನಲ್ಲಿ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪುನರ್‌ರಚಿಸುವ ಅಗತ್ಯವಿದೆ' ಎಂದು ಅವರು ಪ್ರತಿಪಾದಿಸಿದರು.

'ಕನ್ನಡ ಸಾಹಿತ್ಯಕ್ಕೆ ಒಳನೋಟ ಕೊಟ್ಟವರಲ್ಲಿ ನಾಡಿನ ಪ್ರಗತಿಶೀಲ ಲೇಖಕರಲ್ಲಿ ಒಬ್ಬರಾದ ಭಾರತೀಸುತರು ಕೂಡ ಪ್ರಮುಖರು. ನವ್ಯ ಸಾಹಿತ್ಯದಷ್ಟೇ ಮುಖ್ಯವಾದ ಪ್ರಗತಿಶೀಲ ಚಳವಳಿ ಬಗ್ಗೆ ವಿಶ್ವವಿದ್ಯಾಲಯಗಳ ವಾತಾವರಣದ ಹಿನ್ನೆಲೆಯಿಂದ ಬಹುತೇಕ ವಿಮರ್ಶಕರು ನಿರ್ಲಕ್ಷ್ಯ ಧೋರಣೆ ತಳೆದಿದ್ದಾರೆ' ಎಂದು ನೊಂದು ನುಡಿದರು.



ಭಾರತೀಸುತರ ಕಾದಂಬರಿಗಳು ಮತ್ತು ಸಾಮಾಜಿಕ ಸಂದರ್ಭ ವಿಚಾರ ಸಂಕಿರಣ ಉದ್ಘಾಟಿಸುತ್ತಿರುವ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೊ. ಎಂ.ಎಚ್.ಕೃಷ್ಣಯ್ಯ, ವಿ.ಎಸ್.ಮಲ್ಲಿಕಾರ್ಜುನಸ್ವಾಮಿ ಮತ್ತು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಟಿ.ಸಿ. ರಮೇಶ್.

'ಒಬ್ಬ ಲೇಖಕನಿಗೆ ಪ್ರತಿಭೆ, ಕಾಲ ಕಾಲಕ್ಕೆ ಸೂಕ್ತ ವಿಮರ್ಶಾ ಮಾರ್ಗದರ್ಶನದ ಜೊತೆಗೆ ಸ್ವ ವಿಮರ್ಶೆ ಕೂಡ ಅಗತ್ಯ. ಆದರೆ, ಪ್ರಗತಿಶೀಲ ಲೇಖಕರಿಗೆ ಈ ಬಗ್ಗೆ ಎಚ್ಚರ ಇರಲಿಲ್ಲ. ಜನಸಾಮಾನ್ಯರ ಜೊತೆ ಅತ್ಯಂತ ನಿಕಟವಾದ ಸಂಬಂಧ ಹೊಂದಿದ್ದ ಪ್ರಗತಿಶೀಲ ಲೇಖಕರ ಬರವಣಿಗೆ ಹೆಚ್ಚಿನ ಜನರನ್ನು ತಲುಪುವ ಉದ್ದೇಶ ಹೊಂದಿತ್ತು. ಹೀಗಾಗಿ, ಪ್ರಗತಿಶೀಲ ಲೇಖಕರು ಓದುಗರ ಸಂಖ್ಯೆಯನ್ನೂ ಹೆಚ್ಚು ವಿಸ್ತರಿಸಲು ಸಾಧ್ಯವಾಯಿತು' ಎಂದು ವಿಶ್ಲೇಷಿಸಿದರು.

ಜನಪ್ರಿಯತೆ ಪಡೆದ ಲೇಖಕ: 'ಭಾರತೀಸುತರ ಮೇಲೆ ಬಾಲ್ಯದಲ್ಲಿಯೇ ಪಂಜೆ ಮಂಗೇಶರಾಯರಂತಹ ಗುರುಗಳು ಸಿಕ್ಕಿದ್ದು, ಗಾಂಧೀಜಿ ಪ್ರಭಾವಕ್ಕೆ ಒಳಗಾಗಿದ್ದು, ಸೆರೆಮನೆ ವಾಸ ಸಂದರ್ಭದಲ್ಲಿ ಎಡಪಂಥೀಯರ ಚಿಂತಕರ ಸಹವಾಸ ಬೆಳೆಸಿದ್ದು ಅವರನ್ನು ಪ್ರಗತಿಶೀಲ ಲೇಖಕರನ್ನಾಗಿ ಮಾಡಿತು. ಗಾಂಧೀಜಿ ಜೊತೆಗೆ ಲೆನಿನ್ ಕೂಡ ಭಾರತೀಸುತರ ಮೇಲೆ ಪ್ರಭಾವ ಬೀರಿದ್ದಾರೆ.

'ಭಾರತೀಸುತರು ಒಬ್ಬ ನಿಷ್ಠಾವಂತ ಅಧ್ಯಾಪಕರು ಕೂಡ ಆಗಿದ್ದರು. ಆದರೆ, ಇಂದು 'ಸರ್ಚ್ ಲೈಟ್' ಹಾಕಿ ಹುಡುಕಿದರೂ ಅಂತಹ ಆದರ್ಶ ಶಿಕ್ಷಕರು ಸಿಗುವುದಿಲ್ಲ. ನಾವು ಅಂತಹ ಅಧ್ಯಾಪಕರ ಕೊರತೆಯನ್ನು ಎದುರಿಸುತ್ತಿದ್ದೇವೆ' ಎಂದು ವಿಷಾದಿಸಿದ ನರಹಳ್ಳಿ, 'ಭಾರತೀಸುತರ ಬದುಕು ಕೂಡ ಎಲ್ಲರಿಗೂ ಮಾದರಿ. ಬದುಕಿನಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದರೂ ಎಂದಿಗೂ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ. ಅಂತಹ ಉನ್ನತ ಚೇತನಗಳ ಆದರ್ಶವೇ ನಮಗೆ ಇಂದು ಇಲ್ಲವಾಗಿದೆ' ಎಂದರು.

'ವಸಾಹತು ಚಿಂತನೆಗಳ ನಂತರ ವಿಜ್ಞಾನ, ತಂತ್ರಜ್ಞಾನ ಬೆಳೆದಂತೆಲ್ಲಾ ಆಧುನಿಕ ಸವಾಲುಗಳ ಮಧ್ಯೆ ನಾವು ಪ್ರಕೃತಿಯನ್ನು ಮರೆಯುತ್ತಿದ್ದೇವೆ. ಇದೇ ಆಧುನಿಕ ಸಮಸ್ಯೆಗಳಿಗೆಲ್ಲಾ ಮೂಲ. ಪ್ರಕೃತಿಯ ಮಧ್ಯೆ ರೆಸಾರ್ಟ್ ಅಥವಾ ಹೋಂ ಸ್ಟೇ ನಿರ್ಮಿಸುವುದು ಇದಕ್ಕೆ ಪರಿಹಾರ ಕ್ರಮ ಅಲ್ಲ' ಎಂದು ವಿಶ್ಲೇಷಿಸಿದ ಅವರು, 'ಪ್ರಕೃತಿ ಹಾಗೂ ಶ್ರಮಿಕ ಜಗತ್ತು ಭಾರತೀಸುತರ ಬರಹಗಳಲ್ಲಿ ಅನಾವರಣಗೊಂಡಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಗಂಡು ಹಾಗೂ ಹೆಣ್ಣಿಗೆ ಸಂಬಂಧಿಸಿದ ವಿಚಾರಗಳಿಗೆ ಸಂಬಂಧಿಸಿದ ಚಿತ್ರಣ ಭಾರತೀಸುತರ ಲೇಖನಗಳಲ್ಲಿ ಅತ್ಯಂತ ನವಿರಾಗಿವೆ. ವ್ಯಕ್ತಿ ಮತ್ತು ಸಮಾಜ, ಸಂಸ್ಕೃತಿ ಹಾಗೂ ಸಮಾಜಗಳ ನಡುವಿನ ಸಂಘರ್ಷವನ್ನೂ ಅವರ ಲೇಖನಗಳಲ್ಲಿ ಕಾಣುತ್ತೇವೆ. ಹೀಗಾಗಿ ಪ್ರಗತಿಶೀಲ ಲೇಖಕರಲ್ಲಿ ಭಾರತೀಸುತರು ವಿಶಿಷ್ಟರು' ಎಂದು ಬಣ್ಣಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ 'ಭಾರತೀಸುತರ ಅಪ್ರಕಟಿತ ಎರಡು ಕೃತಿಗಳ ಪೈಕಿ ಒಂದನ್ನು ಸಾಹಿತ್ಯ ಅಕಾಡೆಮಿ ಪ್ರಕಟಿಸಲಿದೆ' ಎಂದು ಭರವಸೆ ನೀಡಿದರಲ್ಲದೆ, ಇನ್ನೊಂದು ಅಪ್ರಕಟಿತ ಪುಸ್ತಕವನ್ನು ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಲು ಪ್ರಯತ್ನಿಸುವಂತೆ ಸಲಹೆ ಮಾಡಿದರು.

ನಿರ್ಲಕ್ಷ್ಯಕ್ಕೆ ಒಳಗಾದ ಸುಮಾರು ೧೨೫ ಕವಿಗಳ ಸಾಹಿತಿಗಳ ಪರಿಚಯ, ಸಾಹಿತ್ಯಿಕ ಹಿನ್ನೆಲೆಯುಳ್ಳ ೬೦೦ ಪುಟಗಳ 'ಸಾಲು ದೀಪ' ಪುಸ್ತಕವನ್ನು ಶೀಘ್ರ ಅಂತರ್ಜಾಲದಲ್ಲಿ ಪ್ರಕಟಿಸಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕ ಭಾಷಣ ಮಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಟಿ.ಪಿ. ರಮೇಶ್, ಭಾರತೀಸುತರ ೬೧ ಕೃತಿಗಳಲ್ಲಿ ಎರಡು ಗ್ರಂಥಗಳು ಇನ್ನೂ ಪ್ರಕಟವಾಗದಿರುವ ಬಗ್ಗೆ ಕಣ್ಣೀರಿಟ್ಟು, ಅಪ್ರಕಟಿತ ಎರಡು ಗ್ರಂಥಗಳನ್ನೂ ಪ್ರಕಟಿಸಲು ಸಾಹಿತ್ಯ ಅಕಾಡೆಮಿ ಮುಂದಾಗಬೇಕು ಎಂದು ಕೋರಿದರು.

ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಶ್ವೇತಾ ರವೀಂದ್ರ, ಭಾರತಿ ರಮೇಶ್, ಧನಂಜಯ ನಾಡಗೀತೆ ಹಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಮುನೀರ್ ಅಹಮದ್ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕ.ಸಾ.ಪ. ಗೌರವ ಕಾರ್ಯದರ್ಶಿ ಶ್ವೇತಾ ರವೀಂದ್ರ ವಂದಿಸಿದರು.

*ಕೃಪೆ: ಪ್ರಜಾವಾಣಿ*
*ಶನಿವಾರ ೧೭ನೇ ಅಕ್ಟೋಬರ್ ೨೦೦೯*


## ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣ ವ್ಯವಸ್ಥೆ

*ಅಧ್ಯಕ್ಷರು*
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಜಾಲತಾಣ ಸಂಪಾದಕರು* — **ಶ್ರೀ ಜಿ.ಎನ್. ನರಸಿಂಹಮೂರ್ತಿ**
*ತಾಂತ್ರಿಕ ಸಂಪಾದಕರು* — **ಶ್ರೀ ಕೆ.ಎಸ್. ನವೀನ್**
*ಸಾಹಿತ್ಯ ಸಂಪಾದಕರು* — **ಶ್ರೀ ಎಲ್.ಎನ್. ಮುಕುಂದರಾಜ್**

ಸಲಹೆಗಾರರು : **ಶ್ರೀ ಶ್ಯಾಮಸುಂದರ್, ಶ್ರೀ ಎನ್.ಎ. ಎಂ. ಇಸ್ಮಾಯಿಲ್, ಶ್ರೀ ಎಚ್.ಪಿ. ನಾಡಿಗ್, ಶ್ರೀ ಎನ್. ವಿದ್ಯಾಶಂಕರ್**

**ನಮ್ಮ ಜಾಲತಾಣಕ್ಕೆ ಭೇಟಿ ಕೊಡಿ : "www.karnatakasahithyaacademy.org"**

**ನಿಮ್ಮ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ**

# ಸುತ್ತೂರಿನಲ್ಲಿ “ಇದು ನಿಚ್ಚಂ ಪೊಸತು” ಕಮ್ಮಟ ಆರಂಭ

**ನಂಜನಗೂಡು:** ಸದಾ ಹೊಸತನ್ನು ಹೊತ್ತು ಜುಳುಜುಳು ಹರಿಯುವ ಕಪಿಲೆಯ ಸದ್ದು. ಸುಯ್ಯನೆ ಬೀಸುವ ತಂಗಾಳಿಯ ಪ್ರಶಾಂತ ವಾತಾವರಣದ ಹಾಗೂ ಭಕ್ತಿ–ಸಂಪ್ರದಾಯದ ಕ್ಷೇತ್ರದಲ್ಲಿ ಯುವ ಮನಸ್ಸುಗಳಲ್ಲಿರುವ ಕಾವ್ಯ ರಚನೆಯ ಗೀಳನ್ನು ‘ಪಾಲಿಶ್’ ಮಾಡುವ ಆಶಯದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಜೆಎಸ್ಎಸ್ ಮಹಾವಿದ್ಯಾಪೀಠವು ತಾಲೂಕಿನ ಸುತ್ತೂರು ಮಠದಲ್ಲಿ ಆಯೋಜಿಸಿರುವ ‘ಇದು ನಿಚ್ಚಂ ಪೊಸತು’ – ಯುವ ಕವಿಗಳ ಕಾವ್ಯ ರಚನಾ ಕಮ್ಮಟ ೫–೧೦–೨೦೦೯ರಂದು ಆರಂಭವಾಯಿತು.

ಕವಿಯಾಗಬೇಕು ಎಂದು ಬಯಸುವವರಿಗೆ ಬೇಕಾದ ಎಲ್ಲ ರೀತಿಯ ಮಾಹಿತಿ ಸಂಪನ್ಮೂಲ ಒದಗಿಸುವುದು ಈ ಕಮ್ಮಟದ ಉದ್ದೇಶವಾಗಿತ್ತು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹೆಸರು ಮಾಡಿರುವ ಗಣ್ಯರು ಯುವ ಮನಸ್ಸುಗಳಲ್ಲಿ ಕನ್ನಡ ಸಾಹಿತ್ಯದ ಸಾರವನ್ನು ತುಂಬಿದರು. ಕನ್ನಡ ಜನಪದ ಕಾವ್ಯ, ಪಂಪನ ಕಾವ್ಯ, ಪಂಪನ ಕಾಲದ ಕಾವ್ಯ ವಿಮರ್ಶೆ, ಬಸವಣ್ಣನ ವಚನಗಳಲ್ಲಿ ಕಾವ್ಯಾಂಶ, ಬಸವಯುಗದ ಕಾವ್ಯವಿಮರ್ಶೆ, ಕುವೆಂಪು ಅವರ ಕಾವ್ಯ, ಆಧುನಿಕ ಕನ್ನಡ ವಿಮರ್ಶೆ ಮೊದಲಾದವುಗಳ ಬಗ್ಗೆ ಉಪನ್ಯಾಸ ಮತ್ತು ಸಂವಾದವಿದೆ. ಹೀಗಾಗಿ ಅ. ೧೦ರವರೆಗೂ ‘ಕವನ’ ಕಟ್ಟುವ ಕೆಲಸ ನಡೆಯಲಿದೆ.

**ಕನ್ನಡ ಉಳಿಸಿ–ಬೆಳೆಸಿ:** ಕವನದಲ್ಲಿ ಸದಾ ಹೊಸತು ಬಿಂಬಿಸಬೇಕೆಂಬ ಆಶಯದ ಈ ಕಮ್ಮಟವನ್ನು ಹಿರಿಯ ಕವಿ ಡಾ. ಎನ್.ಎಸ್. ಲಕ್ಷ್ಮಿನಾರಾಯಣಭಟ್ಟರು ಉದ್ಘಾಟಿಸಿದರು. ‘ಕನ್ನಡ ಕಾವ್ಯ–ಸಾಹಿತ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗುವ ಮಹತ್ವದ ಜವಾಬ್ದಾರಿ ಎಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಇಂತಹ ಕಮ್ಮಟಗಳು ಯುವ ಕವಿಗಳನ್ನು ಪಾಲಿಶ್ ಮಾಡುತ್ತವೆ’ ಎಂದು ಅಭಿಪ್ರಾಯಪಟ್ಟರು. ಕನ್ನಡ ಭಾಷೆ ಬಾಯಿಂದ ಜಾರುತ್ತಿದೆ, ಪುಸ್ತಕ ಕೈಯ್ಯಿಂದ ಬೀಳುತ್ತಿರುವ ಸಂದರ್ಭವಿದು. ಪ್ರಾಚೀನವಾದ ಕನ್ನಡ ಭಾಷೆ ನಮ್ಮ ಶ್ರೀಮಂತ ಆಸ್ತಿ. ಅದನ್ನು ಕಳೆದುಕೊಳ್ಳುತ್ತಿದ್ದೇವೆ ಏನೋ ಎಂಬ ಆತಂಕ ವ್ಯಕ್ತಪಡಿಸಿದರು.

‘ತಾಳುವುದ ನೀ ಕಲಿ ಮಗು ಬಾಳುವುದ ನೀ ಕಲಿ’ ಎಂಬ ಕವನದೊಂದಿಗೆ ಮಾತು ಆರಂಭಿಸಿದ ಅವರು ಸುಮಾರು ಒಂದು ಕಾಲು ಗಂಟೆ ಉಪನ್ಯಾಸ ನೀಡಿ, ಯುವ ಕವಿಗಳಿಗೆ ಅಗತ್ಯವಾದ ಮಾಹಿತಿ ತೆರೆದಿಟ್ಟರು.



**ಸುತ್ತೂರಿನಲ್ಲಿ ‘ಕಾವ್ಯಕಮ್ಮಟ’ ಉದ್ಘಾಟಿಸುತ್ತಿರುವ ಡಾ॥ ಎನ್.ಎಸ್. ಲಕ್ಷ್ಮಿನಾರಾಯಣಭಟ್ಟ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯ, ಡಾ॥ ಸಿದ್ಧಲಿಂಗ ಪಟ್ಟಣಶೆಟ್ಟಿ ಮುಂತಾದವರು**

**ಅನುಕರಣೆ ಬೇಡ:** ಅಕಾಡೆಮಿ ರಿಜಿಸ್ಟ್ರಾರ್ ವಿ. ಎನ್. ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಅಕಾಡೆಮಿಯು ಯುವ ಜನಾಂಗವನ್ನು ಗುರಿ ಯಾಗಿಸಿಕೊಂಡು ಕಾರ್ಯಕ್ರಮ ರೂಪಿಸುತ್ತಿದೆ. ಅ. ೩೧ರಿಂದ ಶ್ರವಣಬೆಳಗೊಳದಲ್ಲಿ ಯುವ ಕಥೆಗಾರರಿಗೆ ಕಥಾಕಮ್ಮಟ ನಡೆಯಲಿದೆ ಎಂದು ತಿಳಿಸಿದರು. ಜೆಎಸ್ಎಸ್ ವಿದ್ಯಾಪೀಠ ಉಪನಿರ್ದೇಶಕ ಮ.ಗು. ಸದಾನಂದಯ್ಯ ಮಾತನಾಡಿ, ಕಮ್ಮಟ ದಲ್ಲಿ ಉತ್ತಮ ಕವನಗಳು ಮೂಡಿಬಂದು ಪುಸ್ತಕ ರಚಿಸು ವಂತಾಗಲಿ ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಮಾತನಾಡಿ, “ಕಾವ್ಯಕ್ರಿಯೆ ಎಂದರೆ ಅದೊಂದು ಪವಾಡ, ಬೆರಗು. ಕವನ ರಚಿಸುವಾಗ ಅನುಕರಣೆ ಬೇಡ. ಅನುಭವ ಅತಿಮುಖ್ಯ” ಎಂದರು.

ಶಿಬಿರ ನಿರ್ದೇಶಕರು, ಸಾಹಿತಿಗಳಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ರೂಪ ಹಾಸನ, ಜನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್ ಇದ್ದರು. ಪ್ರೊ. ಮಲೆಯೂರು ಗುರುಸ್ವಾಮಿ ಸ್ವಾಗತಿಸಿದರು. ಡಾ. ಬಿ.ವಿ. ವಸಂತಕುಮಾರ್ ನಿರೂಪಿಸಿದರು.

ಶಿಬಿರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ೩೦ಕ್ಕೂ ಹೆಚ್ಚು ಯುವಕವಿಗಳು ಪಾಲ್ಗೊಂಡಿದ್ದರು.

*ಕೃಪೆ: ಪ್ರಜಾವಾಣಿ*
*ಅಕ್ಟೋಬರ್ ೬, ಮಂಗಳವಾರ*

## ಮುಂದುವರಿದ ದುರ್ಬಲರ ಶೋಷಣೆ

**ಬೆಳಗಾವಿ:** ದುರ್ಬಲ ವರ್ಗದವರ ನಿರ್ಲಕ್ಷ್ಯ ಇನ್ನೂ ನಿಂತಿಲ್ಲ ಎಂದು ಕವಿವಿ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ಕೆ.ಆರ್. ದುರ್ಗಾದಾಸ ಕಳವಳ ವ್ಯಕ್ತಪಡಿಸಿದರು.

ನಗರದ ಜೈನ್ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಅಲಕ್ಷಿತ ಸಮುದಾಯಗಳ ಸಾಹಿತ್ಯ-ಸಂಸ್ಕೃತಿ: ಸವಾಲುಗಳು ಹಾಗೂ ಸಾಧ್ಯತೆಗಳು' ಎಂಬ ರಾಜ್ಯ ಮಟ್ಟದ ಎರಡು ದಿನಗಳ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಾಚೀನ ಕಾಲದಲ್ಲಿ ಅಲಕ್ಷಿಸಲಾದ ಸಮುದಾಯವನ್ನು ಇಂದಿಗೂ ಹೊಸ ರೂಪದಲ್ಲಿ ನಿರ್ಲಕ್ಷಿಸಲಾಗುತ್ತಿದೆ. ಇದರಿಂದ ಹೊಸ ಬಗೆಯ ಶೋಷಣೆಯ ಮುಖಗಳು ಜನ್ಮತಾಳಿವೆ. ಪ್ರಾಚೀನ ಆರ್ಯ-ದ್ರಾವಿಡ ಭಿನ್ನತೆ ಇನ್ನೊಂದು ರೂಪದಲ್ಲಿ ಇಂದಿಗೂ ನಮಗೆ ಕಾಣುತ್ತಿದೆ ಎಂದು ಪ್ರತಿಪಾದಿಸಿದರು.

ಆರ್ಥಿಕ ಉತ್ಪಾದನೆಯ ತಳಹದಿಯಾಗಿರುವ ಅಲಕ್ಷಿತ ಸಮುದಾಯಗಳ ದುಡಿತದ ಲಾಭವನ್ನು ಬೇರೆಯವರೇ ಅನುಭವಿಸುವ ಪದ್ಧತಿ ಇಂದಿಗೂ ಜೀವಂತವಾಗಿ ಉಳಿದಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಪ್ರೊ. ಚಂದ್ರಕಾಂತ ಕುಸನೂರ, ಸ್ವತಂತ್ರ ಭಾರತದಲ್ಲಿ ಇಂದಿಗೂ ಸ್ವಾತಂತ್ರ್ಯ-ಸಮಾನತೆ ಎಂಬುದು ಇಲ್ಲವಾಗಿದೆ. ನಿರಂತರ ಶೋಷಣೆ ಮುಂದುವರಿದಿದೆ ಎಂದು ಹೇಳಿದರು. ಜೆಜಿಐ ಸಂಸ್ಥೆ ಬೆಳಗಾವಿ ನಿರ್ದೇಶಕ ಆರ್.ಜಿ.ಧಾರವಾಡಕರ ಮಾತನಾಡಿ, ಜೈನ ಸಂಸ್ಥೆ ಕನ್ನಡದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದು, ಶೀಘ್ರದಲ್ಲಿ ಜಿಲ್ಲೆಯಲ್ಲಿ ಐದು ಕನ್ನಡ ಶಾಲೆಗಳನ್ನು ತೆರೆಯಿಸಲು ಸಂಸ್ಥೆ ಉದ್ದೇಶಿಸಿದೆ ಎಂದು ಹೇಳಿದರು.

ಪ್ರಾಚಾರ್ಯ ಸಂದೀಪ ನಾಯರ ಉಪಸ್ಥಿತರಿದ್ದರು. ಸಾಹಿತ್ಯ ಅಕಾಡೆಮಿ ಸದಸ್ಯ ಡಾ. ಶಿವಾನಂದ ಕೆಳಗಿನಮನಿ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ವಿವಿಧ ಅಲಕ್ಷಿತ ಸಮುದಾಯಗಳ ಸಾಹಿತ್ಯ ಮತ್ತು ಸಂಸ್ಕೃತಿಯ ವಿವಿಧ ಆಯಾಮ ಗಳ ಕುರಿತು ವಿವಿಧ ಪ್ರಬಂಧಗಳನ್ನು ಮಂಡಿಸಲಾಯಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೆಜಿಐ ಸಂಸ್ಥೆಯ ಜೈನ ಮಹಾವಿದ್ಯಾಲಯಗಳ ಆಶ್ರಯದಲ್ಲಿ ಈ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

*ಕೃಪೆ: ವಿಜಯ ಕರ್ನಾಟಕ*
*ಶುಕ್ರವಾರ ೧೧ ಸೆಪ್ಟೆಂಬರ್ ೨೦೦೯*

## ಅಲಕ್ಷಿತ ಸಮುದಾಯದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆ : ಡಾ. ರಹಮತ್ ತರೀಕೆರೆ ಅಭಿಮತ

**ಬೆಳಗಾವಿ:** ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಅಲಕ್ಷಿತ ಸಮುದಾಯ ಹಿಂದುಳಿದಿದೆ. ಆದರೆ ಈ ಸಮುದಾಯದ ಬದುಕು ಮಾತ್ರ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ರಹಮತ್ ತರೀಕೆರೆ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಜೈನ್ ಕಾಲೇಜಿನಲ್ಲಿ ಶುಕ್ರವಾರ ನಡೆದ "ಅಲಕ್ಷಿತ ಸಮುದಾಯಗಳ ಸಾಹಿತ್ಯ-ಸಂಸ್ಕೃತಿ: ಸವಾಲುಗಳು ಮತ್ತು ಸಾಧ್ಯತೆಗಳು" ವಿಷಯ ಕುರಿತ ವಿಚಾರ ಸಂಕಿರಣದ ಸಮಾರೋಪ ದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ಮತ್ತು ಆರ್ಥಿಕವಾಗಿ ಮುಂದುವರಿದ ಸಮುದಾಯಗಳಲ್ಲಿ ಸಾಂಸ್ಕೃತಿಕ ಕೊರತೆಗಳನ್ನು ಕಾಣುತ್ತೇವೆ. ನೋವು, ಸಂಕಟಗಳು, ಕಲೆ, ಸಾಹಿತ್ಯಗಳ ಸೃಷ್ಟಿಗೆ ಪ್ರಬಲ ಕಾರಣ ವಾಗಿದೆ. ದೈಹಿಕ ಪರಿಶ್ರಮ ಇರುವಲ್ಲಿ, ನಿಸರ್ಗದ ಮಡಿಲಿನಲ್ಲಿ ಬದುಕುವವರಲ್ಲಿ, ಸಂಘರ್ಷಮಯ ಬದುಕು ಸಾಗಿಸುವವರಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆ ಕಟ್ಟಿಕೊಳ್ಳುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಅಲಕ್ಷಿತ ಸಮುದಾಯದ ಹೊಸ ತಲೆಮಾರಿನ ಯುವಕರು, ಸಾಮಾಜಿಕ ಮನ್ನಣೆ ಪಡೆಯದ ಸಂಸ್ಕೃತಿಯನ್ನು ಬಿಟ್ಟುಕೊಡುವು ದರಲ್ಲಿ ತಪ್ಪೇನಿಲ್ಲ. ಆದರೆ, ಅದು ಅತಿರೇಕಕ್ಕೆ ಹೋಗದೆ ಬೇಡವಾದುದನ್ನು ಬಿಟ್ಟು ಅವಶ್ಯವಿರುವುದನ್ನು ಸ್ವೀಕರಿಸುವ ಮನೋಸ್ಥಿತಿಯನ್ನು ಪಡೆದುಕೊಳ್ಳಬೇಕು ಎಂದು ಸಲಹೆ ಮಾಡಿದರು.

ಸಂಸ್ಕೃತಿಯ ಬಗ್ಗೆ ಭಾವುಕತೆಯಿಂದ ಮಾತನಾಡುವುದು ಮತ್ತು ವೈಭವೀಕರಿಸುವುದು ಅಪಾಯಕಾರಿ. ನೂತನ ತಂತ್ರಜ್ಞಾನದ ಬಗ್ಗೆ ನಕಾರಾತ್ಮಕ ಭಾವನೆ ತಾಳದೆ ಅದನ್ನು ಸಕಾರಾತ್ಮಕವಾಗಿ ಉಪಯೋಗಿಸಿಕೊಳ್ಳುವ ಹಾಗೂ ನಿಯಂತ್ರಿಸುವವರ ಬಗ್ಗೆ ಜಾಗೃತಿ ವಹಿಸುವುದು ಅಗತ್ಯವಿದೆ ಎಂದು ಹೇಳಿದರು.

ಪ್ರಾಚಾರ್ಯ ಸಂದೀಪ ನಾಯರ್ ಮಾತನಾಡಿ, ಯುವ ಪೀಳಿಗೆಯಲ್ಲಿ ಭಾಷೆಯ ಬಗ್ಗೆ ಗಂಭೀರ ಕಳಕಳಿಯುಂಟು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತಾಗಲಿ ಎಂದು ಹೇಳಿದರು. ಅಧ್ಯಕ್ಷತೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ವಹಿಸಿದ್ದರು. ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಡಾ. ಶಿವಾನಂದ ಕೆಳಗಿನಮನಿ, ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು. ಡಾ. ಕೆ.ಎನ್. ದೊಡ್ಡಮನಿ ನಿರೂಪಿಸಿದರು.

*-ವಿಜಯ ಕರ್ನಾಟಕ*
*ಶನಿವಾರ ೧೨ ಸೆಪ್ಟೆಂಬರ್ ೨೦೦೯,*

# ಉರ್ದು ಗಜಲ್ ಕನ್ನಡ ಪ್ರೇಮ ಕಾವ್ಯ ಪೂರಕ



“ಗಜಲ್ ಗಾರುಡಿಗ ಶಾಂತರಸ – ಒಂದು ನೆನಪು” ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು

**ರಾಯಚೂರು:** ಉರ್ದು ಗಜಲ್‌ಗಳು ಮತ್ತು ಕನ್ನಡದ ಪ್ರೇಮ ಕಾವ್ಯಗಳು ಒಂದಕ್ಕೊಂದು ಪೂರಕವಾಗಿವೆ. ಶಾಂತರಸರು ರಚಿಸಿದ ಗಜಲ್‌ಗಳಲ್ಲಿ ದಲಿತ, ಬಂಡಾಯದಂಥ ವಿಷಯಗಳು ಸೇರಿವೆ ಎಂದು ಪ್ರೊ. ಅಲ್ಲಮಪ್ರಭು ಬೆಟ್ಟದೂರು ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ಗಳ ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ “ಶಾಂತರಸ– ಒಂದು ನೆನಪು” ವಿಚಾರ ಸಂಕಿರಣದಲ್ಲಿ ಶಾಂತರಸರ ಗಜಲ್‌ಗಳ ಕುರಿತು ಉಪನ್ಯಾಸ ನೀಡಿದರು. ಶಾಂತರಸರು ಈ ಭಾಗದಲ್ಲಿ ಹುಟ್ಟಿದ್ದರಿಂದಲೇ ಅವರಲ್ಲಿ ಉರ್ದು ಮತ್ತು ಕನ್ನಡ ಭಾಷೆಯ ಮೇಲೆ ಹೆಚ್ಚಿನ ಹಿಡಿತ ಸಾಧಿಸಲು ಸಾಧ್ಯವಾಯಿತು. ಅದೇ ಮುಂದೆ ಅವರಿಗೆ ಗಜಲ್‌ಗಳ ರಚನೆಗೆ ಪ್ರೇರಣೆಯನ್ನು ನೀಡಿತು ಎಂದು ಹೇಳಿದರು.

**ಕವಿಗೆ ಬಿಟ್ಟ ವಿಚಾರ:** ಶಾಂತರಸರು ಗಜಲ್ ರಚನೆಯಲ್ಲಿ ಅನೇಕ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಕೆಲವರು ಗಜಲ್ ಸಾಹಿತ್ಯದಲ್ಲಿ ತಮ್ಮ ಕಾವ್ಯನಾಮವನ್ನು ಕಾವ್ಯದ ಪ್ರಾರಂಭದಲ್ಲೇ ಬಳಸಿದರೆ, ಇನ್ನೂ ಕೆಲವರು ಅಂತಿಮ ಸಾಲುಗಳಲ್ಲಿ ಬಳಸುತ್ತಾರೆ. ಆದರೆ ಶಾಂತರಸರು ತಮ್ಮ ಎರಡೂ ಪ್ರಕಾರಗಳ ಗಜಲ್‌ಗಳಲ್ಲಿ ಪ್ರಾಸಯುಕ್ತ ಪದಗಳನ್ನು ಬಳಸುವುದು, ಬಿಡುವುದು ಕವಿಗೆ ಬಿಟ್ಟ ವಿಚಾರ ಎಂಬುದನ್ನು ಪ್ರತಿಪಾದಿಸಿದ್ದಾರೆ ಎಂದು ತಿಳಿಸಿದರು.

ಅದಕ್ಕೆ ಅನೇಕರಿಂದ ಸಾಕಷ್ಟು ಟೀಕೆಗಳನ್ನು ಎದುರಿಸಿದ ಶಾಂತರಸರು ಯಶಸ್ವಿಯಾಗಿ ದ್ವಿಭಾಷೆಗಳಲ್ಲಿ ಗಜಲ್ ಸಾಹಿತ್ಯಕ್ಕೆ ಹೊಸ ರೂಪ ಕೊಟ್ಟಿದ್ದಾರೆ. ಈ ಕಾರಣಕ್ಕೆ ಶಾಂತರಸರು ‘ಗಜಲ್ ಗಾರುಡಿಗ’ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆಂದು ತಿಳಿಸಿದರು.

ಶಾಂತರಸರು ಕಾವ್ಯದ ನಿಯಮ ಉಲ್ಲಂಘಿಸಿದ್ದಾರೆಂದು ಕೆಲವರಿಂದ ಆಪಾದನೆ ಕೇಳಿಬಂದಿತ್ತು. ಆದರೆ ಕಾವ್ಯದ ನಿಯಮ ಪಾಲಿಸುವುದು, ಉಲ್ಲಂಘಿಸುವುದು ಕವಿಯ ಸ್ವಾತಂತ್ರ್ಯಕ್ಕೆ ಬಿಟ್ಟಿದ್ದು ಎಂದರು.

**ನಿರ್ದಿಷ್ಟ ವಿಷಯ ಬೇಕಿಲ್ಲ:** ‘ಗಜಲ್’, ಕಾವ್ಯ ರಚನೆಗೆ ನಿರ್ದಿಷ್ಟವಾಗಿ ವಿಷಯಗಳಿಲ್ಲ. ಆದರೆ ಲೌಕಿಕ ಆಧ್ಯಾತ್ಮಿಕ, ಸಾಮಾಜಿಕ ವಿಚಾರಗಳನ್ನೂ ಬಳಸಿಕೊಳ್ಳುವುದು ಶಾಂತರಸರಿಗೆ ಸಾಧ್ಯವಾಗಿದೆ. ಶಾಂತರಸರು ಪ್ರಕೃತಿ, ಮೋಹ, ಪ್ರೀತಿ, ಮಹಿಳೆ, ವೇಶ್ಯೆ, ದಲಿತ, ಬಂಡಾಯ ವಿಷಯಗಳ ಬಗ್ಗೆ ಗಜಲ್ ರಚಿಸಿದ್ದಾರೆಂದು ಸ್ಮರಿಸಿದರು. ಭಗತ್‌ರಾಜ್ ನಿಜಾಮಕರ್, ಚಿದಾನಂದ ಸಾಲಿ, ರವಿಕುಮಾರ್ ಹಂಪಿ, ಭೀಮೋಜಿರಾವ್ ಜಗತಾಪ್ ಪಾಲ್ಗೊಂಡು ಉಪನ್ಯಾಸಕ್ಕೆ ಪ್ರತಿಕ್ರಿಯಿಸಿದರು.

*ಕನ್ನಡ ಪ್ರಭ ೨೬.೯.೨೦೦೯*

p

## ಕನ್ನಡ ಸಾಹಿತ್ಯಕ್ಕೆ ಗಜಲ್ ಶಾಂತರಸರ ಕೊಡುಗೆ

**ರಾಯಚೂರು:** ಕನ್ನಡ ಸಾಹಿತ್ಯ ಲೋಕಕ್ಕೆ ಗಜಲ್‌ಗಳನ್ನು ಪರಿಚಯಿಸಿದ ಕೀರ್ತಿ ದಿ. ಶಾಂತರಸರಿಗೆ ಸಲ್ಲುತ್ತದೆ ಎಂದು ಹಿರಿಯ ಸಾಹಿತಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಹೇಳಿದರು.

ಅವರು ನಗರದ ಹಮ್‌ದರ್ದ್ ಪ್ರೌಢ ಶಾಲೆಯಲ್ಲಿ ಶುಕ್ರವಾರ ಜಿಲ್ಲಾ ಕಸಾಪ, ಜಿಲ್ಲಾ ಕನ್ನಡ ಶರಣ ಸಾಹಿತ್ಯ ಪರಿಷತ್ತು ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಆಯೋಜಿಸಿದ್ದ ದಿ. ಶಾಂತರಸರು – ಒಂದು ನೆನಪು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

**ಮಾನವ, ಮಾನವೀಯತೆ ಸಂಬಂಧ:** ದಿ. ಶಾಂತರಸರಲ್ಲಿದ್ದ ಸಮೂಹ ಪ್ರಜ್ಞೆಯಿಂದಾಗಿಯೇ ರಾಜ್ಯದ ಈ ಭಾಗದಲ್ಲಿ ಅದ್ಭುತವಾದ ಸಾಹಿತ್ಯ ಸೃಷ್ಟಿಗೆ ಕಾರಣವಾಯಿತು. ಮಾನವ ಮತ್ತು ಮಾನವೀಯತೆಯ ಸಂಬಂಧ ಅವರು ಕೃತಿಯಲ್ಲಿ ವ್ಯಕ್ತವಾಗಿರುವ ರೀತಿ ಅಗಾಧ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಮಾತನಾಡಿ, ಗಜಲ್‌ಗೆ ಕನ್ನಡತನ ತೊಡಿಸಿದ ಖ್ಯಾತಿ ಸಾಹಿತಿ ಶಾಂತರಸರದ್ದು ಎಂದು ಪ್ರಶಂಸಿಸಿದರು.

**ಕನ್ನಡ ಗಜಲ್ ಮೂಲಕ ಜೀವ:** ರಾಜ್ಯದ ಈ ಭಾಗದಲ್ಲಿ ಉರ್ದು ಭಾಷೆಯ ಪ್ರಭಾವದಿಂದ ನಲುಗಿ ಹೋಗಿದ್ದ ಕನ್ನಡ ಭಾಷೆಗೆ ಶಾಂತರಸರು ಕನ್ನಡ ಗಜಲ್‌ಗಳ ಮೂಲಕ ಜೀವ ತುಂಬಿದರು ಎಂದು ಹೇಳಿದರು.

ಗಜಲ್ ಎಂಬುದು ಕಲಾತೀತವಾದ ಪ್ರಸ್ತುತತೆಯನ್ನು ವ್ಯಕ್ತಪಡಿಸುತ್ತದೆ. ಅಂಥ ಒಂದು ಅಣು ಸಾಂದ್ರತೆಯುಳ್ಳ ಸಾಹಿತ್ಯವನ್ನು ಈ ಭಾಗಕ್ಕೆ ಕಟ್ಟಿಕೊಡುವಲ್ಲಿ ಅವರು ಸಾಕಷ್ಟು ಶ್ರಮಿಸಿದ್ದಾರೆಂದು ಹೇಳಿದರು.

**ಶಾಂತರಸರ ಬಗ್ಗೆ ಪುಸ್ತಕ:** ಕರ್ನಾಟಕ ಸಾಹಿತ್ಯ ಅಕಾಡೆಮಿಯು ಈ ಭಾಗದ ಖ್ಯಾತ ಸಾಹಿತಿ ದಿ. ಶಾಂತರಸರ ಕುರಿತು ಇಡೀ ರಾಜ್ಯಕ್ಕೆ ಪರಿಚಯವಾಗುವ ನಿಟ್ಟಿನಲ್ಲಿ ಅವರ ಬದುಕು, ಬರಹ ಮತ್ತು ಸಾಧನೆ ಕುರಿತ ಪುಸ್ತಕವನ್ನು ಹೊರತರಲಿದೆ ಎಂದು ಪ್ರಕಟಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಯ್ಯಪ್ಪ ತುಕ್ಕಾಯಿ, ಅಕಾಡೆಮಿಯ ಸಂಚಾಲಕ ಸದಸ್ಯ ಚಂದ್ರಶೇಖರ್ ವಸ್ತ್ರದ ಮತ್ತಿತರರು ಉಪಸ್ಥಿತರಿದ್ದರು.

*ಕೃಪೆ: ಕನ್ನಡಪ್ರಭ ವಾರ್ತೆ, ೨೫–೯–೨೦೦೯, ಶುಕ್ರವಾರ*

## ಶೀಘ್ರವೇ ಜಗತ್ತಿನ ಶ್ರೇಷ್ಠ ಕಾದಂಬರಿಕಾರರ ಮಾಹಿತಿ ಮಾಲಿಕೆ

**ರಾಯಚೂರು:** ಜಗತ್ತಿನ ಎಲ್ಲ ಭಾಷೆಗಳ ಶ್ರೇಷ್ಠ ಕಾದಂಬರಿಕಾರರು ಹಾಗೂ ಅವರು ಬರೆದ ಕಾದಂಬರಿಗಳ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ ಪ್ರಕಟಿಸುವ ಬಗ್ಗೆ ಸಾಹಿತ್ಯ ಅಕಾಡೆಮಿ ಚಿಂತನೆ ನಡೆಸಿದೆ ಎಂದು ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಹೇಳಿದರು.

ಅವರು ಶುಕ್ರವಾರ 'ಕನ್ನಡಪ್ರಭ'ದೊಂದಿಗೆ ಮಾತನಾಡಿ, ಖ್ಯಾತ ಕಾದಂಬರಿಕಾರರ ಪರಿಚಯ, ಅವರ ಕೃತಿಗಳ ವಸ್ತು ಸಾರಾಂಶ ಹಾಗೂ ಅವರ ಕೃತಿಯ ಕುರಿತು ವಿಮರ್ಶಕರ ಅಭಿಪ್ರಾಯವಿರುವಂಥ ಸಂಗ್ರಹಯೋಗ್ಯ ಮಾಲಿಕೆ ಹೊರತರಲು ಯೋಜಿಸಲಾಗಿದೆ ಎಂದರು. ದೇಶದ ಇತರೆ ಭಾಷೆಗಳ ಕಾದಂಬರಿಕಾರರ ಬಗ್ಗೆಯೂ ಇಂಥ ಪ್ರಯತ್ನ ಮಾಡಲು ನಿರ್ಧರಿಸಿದ್ದು ಕನ್ನಡದ ಖ್ಯಾತ ಕಾದಂಬರಿಕಾರರ ಬಗ್ಗೆಯೂ ಅಕಾಡೆಮಿ ಇಂಥದ್ದೇ ಯೋಜನೆ ರೂಪಿಸಲಿದೆ ಎಂದು ತಿಳಿಸಿದರು.

ಅಕಾಡೆಮಿಯ ತಮ್ಮ ಅವಧಿಯಲ್ಲಿ ಸಮಕಾಲೀನ ಸಾಹಿತ್ಯದ ಕುರಿತು ಚರ್ಚೆಗೆ ಹೆಚ್ಚಿನ ರೀತಿಯಲ್ಲಿ ಒತ್ತು ನೀಡಲಾಗುತ್ತಿದೆ. ಅದರಲ್ಲೂ ಮಕ್ಕಳ ಸಾಹಿತ್ಯವನ್ನು ಹೆಚ್ಚಿಗೆ ಪ್ರಚುರಪಡಿಸುವ ಉದ್ದೇಶವನ್ನು ಇರಿಸಿಕೊಂಡಿದ್ದಾಗಿ ಹೇಳಿದರು.

**ಅನುದಾನ ಕೊರತೆ:** ರಾಜ್ಯದಲ್ಲಿ ಸಾಕಷ್ಟು ಅಕಾಡೆಮಿಗಳ ಸಂಖ್ಯೆಯಿಂದಾಗಿ ಸಾಹಿತ್ಯ ಅಕಾಡೆಮಿ ಸೇರಿದಂತೆ ಇನ್ನಿತರ ಪ್ರಮುಖ ಅಕಾಡೆಮಿಗಳಿಗೆ ಅನುದಾನದ ಕೊರತೆಯಾಗಿದೆ. ಪ್ರತಿವರ್ಷ ೨೦ ಲಕ್ಷ ರೂ. ಮಾತ್ರ ಲಭ್ಯವಾಗುತ್ತಿದೆ. ಇದರಿಂದ ಕಾರ್ಯಕ್ರಮ ರೂಪಿಸುವುದು ಕಷ್ಟಕರ ಎಂದರು.

ಕನ್ನಡದ ಅಭಿವೃದ್ಧಿಗೆ ಸರ್ಕಾರ ಒದಗಿಸುತ್ತಿರುವ ಅನುದಾನ ಯಾತಕ್ಕೂ ಸಾಲದು. ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇವೆ. ಹೆಚ್ಚಿನ ನೆರವಿನ ನಿರೀಕ್ಷೆಯಲ್ಲಿದ್ದೇವೆಂದು ತಿಳಿಸಿದರು.

**ಕನ್ನಡದ ಬಗ್ಗೆ ತಾತ್ಸಾರ:** ಆಧುನಿಕ ಯುಗದಲ್ಲಿ ಮಕ್ಕಳಲ್ಲಿ ಕನ್ನಡದ ಬಗ್ಗೆ ತಾತ್ಸಾರ ಹೆಚ್ಚುತ್ತಿದೆ. ಪಾಲಕರು ಸಹ ಕನ್ನಡ ಭಾಷೆಯ ಬಗ್ಗೆ ಮಕ್ಕಳಿಗೆ ಹೇಳಿಕೊಡುವ ಪರಿಪಾಠ ಮರೆಯುತ್ತಿದ್ದಾರೆ. ಹೀಗಾಗಿ ಮಕ್ಕಳಲ್ಲಿ ಕನ್ನಡ ಕಲಿಕೆಯತ್ತ ಆಸಕ್ತಿ ಮೂಡಿಸಲು ಅಕಾಡೆಮಿ ಸಕಲ ಕ್ರಮ ಕೈಗೊಳ್ಳುತ್ತಿದೆ ಎಂದರು.

ಐಟಿ, ಬಿಟಿ ಯುಗದಲ್ಲಿ ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ಈಗಾಗಲೇ ಲೇಖಕರ ಸಮಗ್ರ ಮಾಹಿತಿ ಸಂಗ್ರಹಿಸಲಾಗುತ್ತಿದ್ದು ಅದನ್ನು ವೆಬ್‌ಸೈಟ್‌ಗೆ ಅಳವಡಿಸಲಾಗುತ್ತದೆ. ಕನ್ನಡ ನಾಡಿನಲ್ಲಿ ಪ್ರಶಸ್ತಿಗಳನ್ನು ಪಡೆದಂಥ ಎಲ್ಲ ಮಹಾನ್ ವ್ಯಕ್ತಿಗಳ ಹಾಗೂ ಸಾಧಕರ ಕುರಿತು ಮಾಹಿತಿಯನ್ನು ಅದರಲ್ಲಿ ಸೇರ್ಪಡೆ ಗೊಳಿಸುತ್ತದೆ ಎಂದು ವಿವರಿಸಿದರು. ಮಕ್ಕಳ ಕವನಗಳನ್ನು ಬಹುಮಾಧ್ಯಮ ಮತ್ತು ಕಾರ್ಟೂನ್ ಬಳಸಿ ಸಂಗೀತ ಸಂಯೋಜನೆಗೊಳಿಸಿ ವೆಬ್‌ಸೈಟ್‌ಗೆ ಅಳವಡಿಸಲಾಗುತ್ತದೆ. ಆ ಮೂಲಕ ಮಕ್ಕಳ ಕವನ, ಸಾಹಿತ್ಯದ ಬೆಳವಣಿಗೆಗೆ ಅನುಕೂಲಕರ ವಾತಾವರಣ ನಿರ್ಮಿಸಲು ಚಿಂತಿಸಲಾಗಿದೆ ಎಂದರು. ಅಕಾಡೆಮಿಯ ರಿಜಿಸ್ಟ್ರಾರ್ ಎ.ಎನ್. ಮಲ್ಲಿಕಾರ್ಜುನಸ್ವಾಮಿ ಉಪಸ್ಥಿತರಿದ್ದರು.

*ಕೃಪೆ: ಕನ್ನಡಪ್ರಭ, ೨೫-೯-೨೦೦೯, ಶುಕ್ರವಾರ*

# ಪುಸ್ತಕ ಪ್ರದರ್ಶನಕ್ಕೆ ಭರ್ಜರಿ ಪ್ರತಿಕ್ರಿಯೆ

**ರಾಯಚೂರು**: ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಹಿತಿ ದಿ. ಶಾಂತರಸರ ನೆನಪುಗಳು ವಿಚಾರ ಸಂಕಿರಣದ ವೇಳೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ನಡೆದ ಪುಸ್ತಕ ಪ್ರದರ್ಶನ, ಮಾರಾಟಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಇಲ್ಲಿನ ಹಮದರ್ದ್ ಶಾಲೆಯಲ್ಲಿ ನಡೆದ ಪುಸ್ತಕ ಪ್ರದರ್ಶನದಲ್ಲಿ ಕನ್ನಡದ ಹೆಸರಾಂತ ಸಾಹಿತಿಗಳು ರಚಿಸಿದ ಅನೇಕ ಪುಸ್ತಕಗಳನ್ನು ಮಾರಾಟಕ್ಕಿರಿಸಲಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ, ಲಡಾಯಿ ಪ್ರಕಾಶನ ಗದಗ, ಕರ್ನಾಟಕ ಪುಸ್ತಕ ಪ್ರಾಧಿಕಾರ ಮತ್ತು ಹಂಪಿ ವಿಶ್ವ ವಿದ್ಯಾಲಯ ಪ್ರಸಾರಾಂಗ ವತಿಯಿಂದ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ನೂರಾರು ಕನ್ನಡ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳನ್ನು ಖರೀದಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದಂಥ ಪ್ರಮುಖರ ಆಂಧ್ರದ ಗಡಿಭಾಗದಲ್ಲಿರುವ ರಾಯಚೂರಿನಲ್ಲಿಯೂ ಕನ್ನಡದ ಸಾಹಿತ್ಯ ಪುಸ್ತಕಗಳ ಮಾರಾಟದಿಂದ ಕನ್ನಡ ಕಂಪು ಹರಡಲು ಅನುಕೂಲವಾಗಲೆಂದು ಆಶಿಸಿದರು.

### ೬ ಸಾವಿರ ರೂ. ಮೌಲ್ಯದ ಪುಸ್ತಕ ಮಾರಾಟ

ವಿಚಾರ ಸಂಕಿರಣದ ಆರಂಭಕ್ಕೂ ಒಂದು ಗಂಟೆ ಮುಂಚೆಯೇ ಆರಂಭವಾದ ಪುಸ್ತಕ ಪ್ರದರ್ಶನ ಮಧ್ಯಾಹ್ನ ೧.೩೦ರ ವರೆಗೆ ನಡೆಯಿತು. ಈ ಮಧ್ಯೆ ಸುಮಾರು ೬ ಸಾವಿರ ರೂ.ಮೌಲ್ಯದ ಪುಸ್ತಕಗಳು ಮಾರಾಟಗೊಂಡಿವೆ ಎಂದು ಲಡಾಯಿ ಪ್ರಕಾಶಕ ಬಸವರಾಜ ಸುಳಿಬಾವಿ 'ಕನ್ನಡಪ್ರಭ'ಕ್ಕೆ ತಿಳಿಸಿದರು.

ಅವುಗಳಲ್ಲಿ ರಾಷ್ಟ್ರಕವಿ ಕುವೆಂಪು ಕೃತಿಗಳು, ಭಯೋತ್ಪಾದನೆ, ಸಾಮಾಜಿಕ, ದಲಿತ ಬಂಡಾಯ ಹಾಗೂ ವಿವಿಧ ಕವನ ಸಂಕಲನಗಳು ಹೆಚ್ಚಾಗಿ ಮಾರಾಟಗೊಂಡಿವೆ ಎಂದು ಅವರು ತಿಳಿಸಿದರು.



**ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಸಂದರ್ಭದಲ್ಲಿ ಆಸಕ್ತ ಪುಸ್ತಕಪ್ರೇಮಿಗಳು**

ರಾಜ್ಯ ವಿವಿಧೆಡೆ ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ತಾವು ಪಾಲ್ಗೊಂಡಿದ್ದರೂ ಈ ಬಾರಿ ರಾಯಚೂರಿನಲ್ಲಿ ನಡೆದ ಈ ಪ್ರದರ್ಶನದ ವೇಳೆ ಒಂದೇ ದಿನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳು ಮಾರಾಟಗೊಂಡಿದ್ದಕ್ಕೆ ಅಚ್ಚರಿ ವ್ಯಕ್ತಪಡಿಸಿದರು.

*ಕನ್ನಡ ಪ್ರಭ ೨೫.೦೯.೨೦೦೯ ಶುಕ್ರವಾರ*



**ಶ್ರೀ ಎಂ.ವೀರಪ್ಪಮೋಯಿಲಿಯವರ 'ಶ್ರೀರಾಮಾಯಣ ಮಹಾನ್ವೇಷಣಂ' ಮಹಾಕಾವ್ಯಕ್ಕೆ 2007ರ ಮೂರ್ತಿದೇವಿ ಪ್ರಶಸ್ತಿ ಲಭಿಸಿದೆ. ಈ ಗೌರವಕ್ಕೆ ಪಾತ್ರರಾದ ಕನ್ನಡಿಗರಲ್ಲಿ ಎರಡನೆಯವರು. ಈ ಮೊದಲು ಈ ಮಾನ್ಯತೆಗೆ ಭಾಜನರಾದ ಕನ್ನಡಿಗರು– ಶ್ರೀ ಸಿ.ಕೆ. ನಾಗರಾಜರಾವ್ 1983 – ಪಟ್ಟಮಹಾದೇವಿ ಶಾಂತಲಾ (ಕಾದಂಬರಿ) ಈ ಪ್ರಶಸ್ತಿಗೆ ಪಾತ್ರರಾದ ಮೊದಲಿಗರು ಹೌದು.**

# ಸಾಮಾಜಿಕ ಪಿಡುಗುಗಳ ವಿರುದ್ಧ ಸಾಹಿತ್ಯ ಅಸ್ತ್ರವಾಗಬೇಕು

l *ಪ್ರೊ. ಬಿ.ಕೆ. ಚಂದ್ರಶೇಖರ್*

**ಮಂಡ್ಯ, ಆ.೨೮ –** ಸರ್ಕಾರಗಳು ಯಾವುದೇ ಆಗಲಿ, ಸಾಮಾಜಿಕ ಬದ್ಧತೆ, ನಿಷ್ಠೆ, ವಿಚಾರಗಳಲ್ಲಿ ನಿರೀಕ್ಷಿತ ಅಭಿವೃದ್ಧಿಯತ್ತ ಗಮನ ಹರಿಸದೇ ಇರುವುದು ವಿಷಾದದ ಸಂಗತಿಯಾಗಿದೆ ಎಂದು ಮಾಜಿ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಹೇಳಿದರು.

ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಕರ್ನಾಟಕ ಸಂಘ, ಕಾಲೇಜಿನ ಸಾಹಿತ್ಯ ವೇದಿಕೆ ಮತ್ತು ಸಾಹಿತ್ಯ ಅಕಾಡೆಮಿ ಸಂಯುಕ್ತವಾಗಿ ಏರ್ಪಡಿಸಿದ್ದ 'ಡಾ.ರಾಗೌ ವ್ಯಕ್ತಿ ಮತ್ತು ಸಾಹಿತ್ಯ, ವಿಚಾರ ಸಂಕಿರಣ' ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಪಾಠ ಮಾಡುವ ಅಧ್ಯಾಪಕರು ಸಂಶೋಧನೆ ಮಾಡುವುದು ಕಡಿಮೆ. ಆದರೆ ಕನ್ನಡ, ಇಂಗ್ಲಿಷ್ ಭಾಷಾ ಬೋಧಕರು ಪಾಠ ಮಾಡುವುದರ ಜೊತೆಗೆ ಬರವಣಿಗೆ, ಸಂಶೋಧನೆಯಲ್ಲಿಯೂ ನಿರತರಾಗಿರುವುದು ಸಂತೋಷದ ವಿಚಾರ ಎಂದು ಚಂದ್ರಶೇಖರ್ ಅಭಿಪ್ರಾಯಪಟ್ಟರು. ದೇಶದ ಮೊದಲ ಶತ್ರು ಕೋಮುವಾದವಾಗಿದ್ದು, ನಾವು ನೀವೆಲ್ಲಾ ಅಸಹಾಯಕರಾಗಿ ಕುಳಿತಿದ್ದೇವೆ. ವಾದ ವಿವಾದ ಬೇಕಾಗಿಲ್ಲ. ಸಂವಾದ ನಡೆಯಬೇಕು. ಸಾಮಾಜಿಕ ಪಿಡುಗುಗಳ ವಿರುದ್ಧ ಸಾಹಿತ್ಯವನ್ನು ಅಸ್ತ್ರವಾಗಿ ಬಳಸಿದ ಕುವೆಂಪುರವರ ಕೃತಿಗಳನ್ನು ನೂರಕ್ಕೆ ತೊಂಬತ್ತು ಜನ ಓದಿರುವುದೇ ಇಲ್ಲ. ಆದರೆ ಕುವೆಂಪು ಹೆಸರನ್ನು ಮಾತ್ರ ಹತ್ತಾರು ಸಲ ನೆನಪು ಮಾಡಿಕೊಳ್ಳುತ್ತಾರೆ ಎಂದು ಮಾಜಿ ಸಚಿವರು ವಿಷಾದಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಮಂಡ್ಯದ ಕರ್ನಾಟಕ ಸಂಘ ಸಮಾಜಕ್ಕೆ ಅತ್ಯಂತ ಉಪಯುಕ್ತವಾದ ಸಾಹಿತ್ಯ, ಸಂಸ್ಕೃತಿ ಕಲೆಯ ಕೆಲಸಗಳನ್ನು ಮಾಡುತ್ತಾ ಕ್ರಿಯಾಶೀಲ ಸಂಘವಾಗಿ ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದರಲ್ಲಿ ಇಡೀ ರಾಜ್ಯದಲ್ಲಿಯೇ ಮುಂಚೂಣಿ ಯಲ್ಲಿದೆ ಎಂದರು.

ಡಾ. ರಾಮೇಗೌಡರ ಸ್ಥಾಯಿಭಾವ ಅಭಿಜಾತವಾಗಿದ್ದು, ತಳಮಟ್ಟದ, ಆಳವಾದ ವಿಮರ್ಶೆಯನ್ನು ಅವರು ಮಾಡಿದ್ದಾರೆ. 'ಮೌನ ಕ್ರಿಯಾಶೀಲತೆ'ಯ ಮೂಲಕ ಅಂತರ ಶಿಸ್ತಿಯ ವಿಮರ್ಶೆ ಮಾಡಿರುವ ಡಾ. ರಾಗೌ ಅಮೂಲ್ಯ ಕೃತಿಗಳನ್ನು ನೀಡಿದ್ದಾರೆ.

ದೇಶೀ ಪರಂಪರೆ ಬಗ್ಗೆ ಅಪಾರ ಒಲವುಳ್ಳ ಡಾ. ರಾಗೌ ಸೃಜನಶೀಲ ಕವಿತೆಗಳನ್ನು ಬರೆದಿದ್ದಾರೆ ಎಂದು ಕೃಷ್ಣಯ್ಯ ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿದ್ದ ಸಂಶೋಧಕ. ಹ.ಕ. ರಾಜೇಗೌಡರು ಮದ್ದೂರು ತಾಲ್ಲೂಕಿನ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ಸ್ವಯಾರ್ಜಿತವಾಗಿ ರಾಜ್ಯಮಟ್ಟದ ವಿದ್ವಾಂಸರಾಗಿ ಬೆಳೆದ ಡಾ. ರಾಗೌ ಮದ್ದೂರು ಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಪ್ರಾದೇಶಿಕ ಕಾದಂಬರಿಯೊಂದನ್ನು ಬರೆಯಬೇಕೆಂಬುದು ನನ್ನ ಆಸೆಯಾಗಿದೆ. ಹಳಗನ್ನಡ, ಜಾನಪದ, ವಿಮರ್ಶೆ ಯಾವುದೇ ಕ್ಷೇತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿರುವ ರಾಗೌ ಕಿಟ್ಟೆಲ್ ಕೋಶದಲ್ಲಿ ಗಾದೆಗಳನ್ನು ಹೆಕ್ಕಿ ತೆಗೆದು ಪುಸ್ತಕವಾಗಿ ಪ್ರಕಟಿಸಿದ ದೃಷ್ಟಿ. ಅವರ ಸಂಶೋಧನಾ ರೀತಿಗೆ ಸಾಕ್ಷಿಯಾಗಿದೆ.

ಅವರಿಗೆ ಸಿಗಬೇಕಾದಷ್ಟು ಮಾನ್ಯತೆ ಸಾಹಿತ್ಯ ಕ್ಷೇತ್ರದಲ್ಲಿ ಸಿಕ್ಕಲಿಲ್ಲ. ಕನ್ನಡ ಅಧ್ಯಯನ ಸಂಸ್ಥೆಗೆ ನಿರ್ದೇಶಕರಾಗದ, ಪ್ರಾಧ್ಯಾಪಕರಾಗಲು ಅವಕಾಶವೇ ದೊರೆಯದೆ ನಿವೃತ್ತರಾದ ಡಾ. ರಾಗೌ ಸಾಹಿತ್ಯ ತುಂಬಾ ಆಳವಾದ ವಿದ್ವತ್ತಿನಿಂದ ಚಿಕಿತ್ಸಕ ಮನೋಭಾವದಿಂದ ಕೂಡಿರುತ್ತದೆ ಎಂದು ಹ.ಕ.ರಾ. ಅಭಿಪ್ರಾಯಪಟ್ಟರು.

**ಚಿಂತನಾ ಲೇಖ:** ಮಹಿಳಾ ಪ್ರಥಮ ದರ್ಜೆ ಕಾಲೇಜು 'ಚಿಂತನಾ ಲೇಖ' ಎಂಬ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರತರುತ್ತಿರುವುದು ಆಶ್ಚರ್ಯದ ವಿಚಾರ ಎಂದು ಪ್ರೊ. ಎಂ.ಎಚ್. ಕೃಷ್ಣಯ್ಯ ಅಭಿನಂದನೆ ಸಲ್ಲಿಸಿದರು. ಸರ್ಕಾರಿ ಕಾಲೇಜೊಂದು ಇಂತಹ ಪತ್ರಿಕೆಯನ್ನು ಪ್ರಕಟಿಸುವ ಧೈರ್ಯ ವಹಿಸಿದೆ ಎಂದರೆ ನನಗೆ ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ. ಇಡೀ ರಾಜ್ಯದಲ್ಲಿ ಇಂತ ಒಂದು ಜಾಗತಿಕ ಹಿಂಸೆಯ ವಿರುದ್ಧ ಜಾಗೃತಿ ಉಂಟುಮಾಡುವ ವಿಶೇಷ ಲೇಖನಗಳನ್ನೊಳಗೊಂಡ ಮೌಲಿಕವಾದ ಲೇಖನಗಳನ್ನು ಕಲೆ ಹಾಕಿ ಸಂಪಾದಿಸಿರುವ ಪ್ರಾಂಶುಪಾಲ ಪ್ರೊ. ನಾಗರಾಜು, ಸಂಪಾದಕ ಪ್ರೊ. ವರದರಾಜು ಅಭಿನಂದನಾರ್ಹರು ಎಂದು ಮಾಜಿ ಸಚಿವ ಬಿ.ಕೆ. ಚಂದ್ರಶೇಖರ್ ಅಭಿನಂದಿಸಿದರು. ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಮಲ್ಲಿಕಾರ್ಜುನಸ್ವಾಮಿ ಸ್ವಾಗತ ಮಾಡಿ, ಅನೇಕ ವಿದ್ವಾಂಸರು ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದು ಅವರ ನಿಜವಾದ ವ್ಯಕ್ತಿತ್ವವನ್ನು ಸಮಾಜಕ್ಕೆ ಯುವಪೀಳಿಗೆಗೆ ತೋರ್ಪಡಿಸುವ ಉದ್ದೇಶದಿಂದ ಇಂತಹ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗುತ್ತಿದೆ ಎಂದು ಸ್ವಾಗತಿಸಿದರು.

ವಂದನಾರ್ಪಣೆ ಮಾಡಿದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡರು ಕನ್ನಡ ಸಾಹಿತ್ಯದ ಅರುಣೋದಯ ಕಾಲದ ಕವಿಗಳನ್ನು ಕುರಿತು ವಿಚಾರ ಸಂಕಿರಣಗಳು ಸಾಕಷ್ಟು ನಡೆದಿವೆ. ಮುಂದೆ ಎರಡು ಮತ್ತು ಮೂರನೆ ತಲೆಮಾರಿನ ಸೃಜನಶೀಲ ಸಾಹಿತಿಗಳ, ವೈಚಾರಿಕ ಬರಹಗಾರರ ಪರಿಚಯ ಯುವ ಸಮೂಹಕ್ಕೆ ಮಾಡುವ ಅಗತ್ಯ ತುಂಬಾ ಇದೆ. ಆದ್ದರಿಂದ ಡಾ. ರಾಗೌ ಸಾಹಿತ್ಯ ಕುರಿತಂತೆ ಸಾಹಿತ್ಯ ಅಕಾಡೆಮಿ ನಮ್ಮ ಜೊತೆಯಲ್ಲಿ ಏರ್ಪಡಿಸಿರುವ ವಿಚಾರ ಸಂಕಿರಣ ಔಚಿತ್ಯಪೂರ್ಣ ವಾಗಿದೆ ಎಂದರು. ಕಸಾಪ ಮಾಜಿ ಅಧ್ಯಕ್ಷ ಪ್ರೊ. ಜಿ.ಟಿ. ವೀರಪ್ಪ, ತೈಲೂರು ವೆಂಕಟಕೃಷ್ಣ ಉಪಸ್ಥಿತರಿದ್ದರು.

ಪ್ರಾಧ್ಯಾಪಕ ಹುಲಿಕೆರೆ ಮಹದೇವು ಕಾರ್ಯಕ್ರಮ ನಿರೂಪಿಸಿದರು.

*ಕೃಪೆ: ಆಂದೋಲನ, ೨೯-೮-೨೦೦೯ ಶನಿವಾರ*

p

## ವಿಚಾರ ಸಂಕಿರಣ ಉದ್ಘಾಟನೆ

**ರಾಮನಗರ:** ಜಾನಪದ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ ಜಾನಪದ ಲೋಕದ ನಿರ್ಮಾತೃ ನಾಡೋಜ ಎಚ್.ಎಲ್. ನಾಗೇಗೌಡರ ಪ್ರತಿಯೊಂದು ಕೃತಿಗಳನ್ನು ಮರು ಮುದ್ರಿಸುವ ಮೂಲಕ ಜಾನಪದ ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಬೇಕು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ತಿಳಿಸಿದರು.

ಜಾನಪದ ಲೋಕದಲ್ಲಿ ಕರ್ನಾಟಕ ಜಾನಪದ ಪರಿಷತ್ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಸಂಯುಕ್ತವಾಗಿ ಆಯೋಜಿಸಿದ್ದ ಎಚ್.ಎಲ್. ನಾಗೇಗೌಡರ ಬದುಕು ಬರಹ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಬೃಹತ್ ಕಾದಂಬರಿಯ ಎಲ್ಲಾ ಎಂಟು ಸಂಪುಟಗಳು ಇಡೀ ಗ್ರಂಥ ಲೋಕಕ್ಕೆ ಸಮಗ್ರ ಕಾಣಿಕೆಯಾಗಿದ್ದು, ಇವುಗಳನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದರೆ ಅವರ ಕೃತಿಗಳಿಗೆ ವಿಶ್ವ ಮಾನ್ಯತೆ ದೊರಕಿಸಿದಂತಾಗುತ್ತದೆ ಎಂದು ತಿಳಿಸಿದರು.

ಕೆಲವು ದಶಕಗಳ ಹಿಂದೆ ಲಲಿತ ಕಲೆಯನ್ನು ಅತ್ಯಂತ ಸೃಜನಶೀಲ ಕಲೆ ಎಂದು ಕಾಣಲಾಗುತ್ತಿದ್ದ ಕಾರಣ ಜಾನಪದ ಕಲೆಗೆ ಹೆಚ್ಚಿನ ಮಾನ್ಯತೆ ಇರಲಿಲ್ಲ. ಆದರೆ ಇಂದು ಕಾಲ ಬದಲಾಗಿದ್ದು ಜಾನಪದ ಕಲೆಗೆ ಹೆಚ್ಚಿನ ಶ್ರೇಷ್ಠತೆ ದೊರೆತಿದ್ದು, ನಾಗರಿಕತೆಗೆ ಅನುಗುಣವಾಗಿ ಕಲೆಯನ್ನು ತಂತ್ರಜ್ಞಾನದ ಮೂಲಕವೇ ಬೆಳೆಸುವ ಯೋಜನೆಯನ್ನು ರೂಪಿಸಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ನಾಡೋಜ ಜಿ. ನಾರಾಯಣ ಮಾತನಾಡಿ, ಮಾನವ ಕುಲ ಸೃಷ್ಟಿಯಾದಾಗಿನಿಂದ ಜಾನಪದ ಕಲೆಯು ಅಸ್ತಿತ್ವವನ್ನು ಪಡೆದಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಇಲ್ಲದಿರುವ ಸಂದರ್ಭದಲ್ಲಿ ಜಾನಪದ ಕಲೆಯು ದೈವದತ್ತ ಕಲೆಯಾಗಿ ಜನಮಾನಸದಲ್ಲಿ ನೆಲೆಸಿತ್ತು. ಇಂತಹ ಕಲೆಗಳನ್ನು ಮುಂದಿನ ಪೀಳಿಗೆಗೆ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಹೊಣೆಯಾಗಿದೆ ಎಂದು ತಿಳಿಸಿದರು.

ಜಾನಪದ ಪರಿಷತ್ ಕಾರ್ಯಾಧ್ಯಕ್ಷ ಟಿ. ತಿಮ್ಮೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಾನಪದ ಪರಿಷತ್ ಮ್ಯಾನೇಜಿಂಗ್ ಟ್ರಸ್ಟಿ ಇಂದಿರಾ ಬಾಲಕೃಷ್ಣ, ಕಾರ್ಯದರ್ಶಿ ಡಾ. ಚಕ್ಕೆರೆ ಶಿವಶಂಕರ್, ಆಡಳಿತಾಧಿಕಾರಿ ಪ್ರೊ. ಎಂ. ಶಿವನಂಜಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಹಿರಿಯ ವೈದ್ಯ ಡಾ. ಎಸ್.ಎಲ್.ತಿಮ್ಮಯ್ಯ, ರಂಗಕರ್ಮಿ ಬೈರ್ನಳ್ಳಿ ಶಿವರಾಂ, ಮತ್ತಿತರರು ಉಪಸ್ಥಿತರಿದ್ದರು.

*ಕೃಪೆ: ಪ್ರಜಾವಾಣಿ*
*ಶುಕ್ರವಾರ ೯ನೇ ಅಕ್ಟೋಬರ್ ೨೦೦೯,*

## ಅಕಾಡೆಮಿ ಇ-ತೋಟ ವಿಹಾರ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಂತರ್ಜಾಲ ತಾಣ ನಳನಳಿಸುತ್ತಿದೆ. ಅದೀಗ ಕನ್ನಡದ ಬಗ್ಗೆ ಪ್ರೀತಿ ಮೂಡಿಸುವ ಬಗೆಯ, ಜಾಲಿಗರಿಗೆ ಆಪ್ತ ಎನಿಸುವ ರೀತಿಯ ಜಾಲತಾಣ.

www.karnatakasahithyaacademy.org ಕ್ಲಿಕ್ಕಿಸಿ, ಉಪಯುಕ್ತ ಮಾಹಿತಿಯ ಪೂರವೇ ತೆರೆದುಕೊಳ್ಳುತ್ತದೆ. ಸಾಹಿತ್ಯ ಅಕಾಡೆಮಿಯ ಹಿನ್ನೆಲೆ, ಅದರ ಧ್ಯೇಯೋದ್ದೇಶಗಳು, ಅಕಾಡೆಮಿಯ ಸದಸ್ಯರು, ಅಧ್ಯಕ್ಷರಿಗೆ ಸಂಬಂಧಿಸಿದ ಮಾಹಿತಿ, ಕಾರ್ಯಚಟುವಟಿಕೆ, ಅಕಾಡೆಮಿಯ ದತ್ತಿನಿಧಿಗಳು-ಹೀಗೆ ಹಲವು ಮಾಹಿತಿ ಲಭ್ಯ.

ಜಾಲತಾಣದ ವಿಶೇಷ ಇರುವುದು ಕವಿ-ಕಾವ್ಯ ದರ್ಶನದಲ್ಲಿ. ಕವಿಗಳು ತಮ್ಮ ಕವನಗಳನ್ನು ತಾವೇ ವಾಚಿಸಿರುವ ವಿಡಿಯೋ ಕ್ಲಿಪಿಂಗ್‌ಗಳು ಈ ವಿಭಾಗದಲ್ಲಿವೆ. ದೂರದ ದೇಶದಲ್ಲಿರುವವರಲ್ಲಿ ಅಥವಾ ಕವಿಗಳ ಕವನ ವಾಚನವನ್ನು ಇದುವರೆಗೂ ನೋಡದೇ ಇರುವಂತಹವರಲ್ಲಿ ಈ ಕವಿ-ಕಾವ್ಯ ದರ್ಶನ ಪುಳಕ ಉಂಟುಮಾಡಬಲ್ಲದು. ಈ ಕವಿ-ಕಾವ್ಯ ಸಂಭ್ರಮ 'ಸ್ವಂತ ಕವಿತೆಯ ಓದು' ಎಂಬ ಕೊಂಡಿಯಲ್ಲಿ ಲಭ್ಯ. ಇದು ತುಂಬಾ ವೇಗವಾಗಿ ತೆರೆಯ ಮೇಲೆ ಮೂಡುತ್ತದೆ. ಮಾತ್ರವಲ್ಲ ಕವಿತೆಯ ಸಾಲುಗಳೂ ಇಲ್ಲಿ ಕಾಣಿಸುತ್ತವೆ, ಕೇಳಿಸುತ್ತವೆ. ಇದರ ಜೊತೆಗೆ ಆ ಕವಿಯ ಸಂಕ್ಷಿಪ್ತ ಪರಿಚಯ, ಅವರು ವಾಚಿಸಿದ ಕವಿತೆಯ ವಿಮರ್ಶೆ ಕೂಡ ಲಭ್ಯ. ಸದ್ಯಕ್ಕೆ ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ, ಚೆನ್ನವೀರ ಕಣವಿ, ನಿಸಾರ್ ಅಹಮದ್, ಸಿದ್ಧಲಿಂಗಯ್ಯ, ಯು.ಆರ್. ಅನಂತಮೂರ್ತಿ ಅವರ ವಿಡಿಯೋ ಕ್ಲಿಪಿಂಗ್‌ಗಳು ಲಭ್ಯವಿವೆ.

ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಪುಸ್ತಕಗಳ ದೊಡ್ಡ ಪಟ್ಟಿಯೇ ಜಾಲತಾಣದಲ್ಲಿದೆ. ಅವುಗಳನ್ನು ಸೂಕ್ತ ವರ್ಗೀಕರಣದ ಮೂಲಕ ಓರಣವಾಗಿ ಪ್ರಕಟಿಸಲಾಗಿದೆ. ವಿಶೇಷ ಕೃತಿಗಳು, ಕವಿತೆಗಳು, ವಿನೋದ ಸಾಹಿತ್ಯ, ಪ್ರಬಂಧ.... ಹೀಗೆ ಇಪ್ಪತ್ತೆರಡು ವಿಭಾಗಗಳಿವೆ. ಪುಸ್ತಕಗಳ ಶೀರ್ಷಿಕೆ, ಅವುಗಳ ಬೆಲೆ, ಲೇಖಕರ ಹೆಸರುಗಳ ಮಾಹಿತಿಯಿದೆ.

ಕನ್ನಡ ಸಾಹಿತ್ಯ ಕೃತಿಗಳಿಗೆ ಸಂದ ಪುರಸ್ಕಾರ-ಪ್ರಶಸ್ತಿಗಳನ್ನು ಲೆಕ್ಕ ಇಟ್ಟವರಾರು? ಅಂಥ ಪ್ರಯತ್ನ ಅಕಾಡೆಮಿ ಮಾಡಿದೆ. ಪ್ರಶಸ್ತಿ ಬಂದ ಕೃತಿ, ಅದರ ಲೇಖಕರು, ಪ್ರಶಸ್ತಿ ಬಂದ ವರ್ಷ, ಆ ಕೃತಿ ಯಾವ ಪ್ರಕಾರಕ್ಕೆ ಸೇರುತ್ತದೆ ಎಂಬೆಲ್ಲ ಮಾಹಿತಿಗಳನ್ನು ಕಲೆಹಾಕಲಾಗಿದೆ.

ಕನ್ನಡದ ಪ್ರಮುಖ ಕವಿಗಳ ಹೆಸರು, ಅವರ ವಿಳಾಸಗಳ ಮಾಹಿತಿಯೂ ಜಾಲತಾಣದಲ್ಲಿದೆ. ಅದಕ್ಕೆಂದೇ ಪ್ರತ್ಯೇಕ ಸರ್ಚ್ ಎಂಜಿನ್ ಇದೆ. ಇದರಲ್ಲಿ ಕವಿಗಳ ಹೆಸರನ್ನು ನಮೂದಿಸಿದರೆ ಅವರ ವಿಳಾಸ ಸಿಗುತ್ತದೆ. ಜಿಲ್ಲಾವಾರು ಸಾಹಿತಿಗಳ ವಿಳಾಸಗಳೂ ಇಲ್ಲಿ ಸಿಗುವುದರಿಂದ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಬಲು ಪ್ರಯೋಜನಕಾರಿ.

***-ಕೆ.ಎಸ್. ಗಿರೀಶ***
*ಕೃಪೆ: ಮಯೂರ, ನವೆಂಬರ್ ೨೦೦೯*



“ಅಲಕ್ಷಿತ ಸಮುದಾಯಗಳ ಸಾಹಿತ್ಯ ಸಂಸ್ಕೃತಿ: ಸಾವಲುಗಳ ಸಾಧ್ಯತೆಗಳು” ವಿಚಾರ ಸಂಕಿರಣ ಉದ್ಘಾಟಿಸುತ್ತಿರುವ ಡಾ. ಕೆ.ಆರ್. ದುರ್ಗಾದಾಸ ಚಂದ್ರಕಾಂತ ಕುಸನೂರು, ಆರ್.ಜಿ. ಧಾರವಾಡಕರ, ಶಿವಾನಂದ ಕೆಳಗಿನಮನಿ, ಮುಂತಾದವರು.



“ರಾ.ಗೌ. ವ್ಯಕ್ತಿ ಮತ್ತು ಸಾಹಿತ್ಯ ವಿಚಾರ ಸಂಕಿರಣ” ಉದ್ಘಾಟಿಸುತ್ತಿರುವ ಬಿ.ಕೆ. ಚಂದ್ರಶೇಖರ್ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯ ಮತ್ತು ಬಿ. ಜಯಪ್ರಕಾಶ್, ತೈಲೂರು ವೆಂಕಟಕೃಷ್ಣ ಮುಂತಾದವರು.



ಶ್ರವಣಬೆಳಗೊಳದಲ್ಲಿ ಜರುಗಿದ ಕಥಾಕಮ್ಮಟದಲ್ಲಿ ಭಾಗವಹಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ಮನುಬಳಿಗಾರ್, ಡಾ. ಅಮರೇಶ್ ನುಗಡೋಣಿ, ಡಾ. ಪ್ರಹ್ಲಾದ ಅಗಸನಕಟ್ಟೆ ಮತ್ತಿತರರು



ಮಂಡ್ಯದಲ್ಲಿ ಜರುಗಿದ ಡಾ. ರಾ.ಗೌ. ವ್ಯಕ್ತಿ ಮತ್ತು ಸಾಹಿತ್ಯ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿರುವ ಪ್ರೊ. ಬಿ.ಕೆ.ಚಂದ್ರಶೇಖರ್, ಬಿ.ಜಯಪ್ರಕಾಶ್ ಗೌಡ, ಹ.ಕ. ರಾಜೇಗೌಡ ಮತ್ತಿತರರು



ಕಥಾಕಮ್ಮಟದಲ್ಲಿ ಸಾನ್ನಿಧ್ಯ ವಹಿಸಿದ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಹಾಗೂ ಶಿಬಿರದ ನಿರ್ದೇಶಕರಾದ ಅಮರೇಶ ನುಗಡೋಣಿ ಮತ್ತು ಪ್ರಹ್ಲಾದ ಅಗಸನಕಟ್ಟೆ.



ರಾ.ಗೌ. ವ್ಯಕ್ತಿ ಮತ್ತು ಸಾಹಿತ್ಯ ವಿಚಾರ ಸಂಕಿರಣ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಜಯರಾಮರಾಜೇ ಅರಸ್